


ಸಂಪುಟ ೫ | ನವೆಂಬರ್ ೧೯೪೬ | ಸಂಚಿಕೆ ೮

ಕುಹಕಿಡಿಗಳು

"ಚಿರಮಭಿವರ್ಧತಾಂ ಯದು ಸಂತಾನ ಶ್ರೀಃ"

—ಕನ್ನಡಮ್ಮನ ಮುದ್ದುಮನೆತನ ನಂದಗೋಕುಲವಾಗಲಿ—

* * *

ಸರ್ವಭಕ್ಷಕನೊಬ್ಬನು ಪ್ರದರ್ಶನ ಒಂದರಲ್ಲಿ ಕಲ್ಲು, ಮಣ್ಣು, ಮೊಳೆ, ಮೊದಲಾದುವುಗಳನ್ನು ತಿಂದನಂತೆ.

—ಅವನನ್ನು ಆಹಾರ ಸಚಿವನನ್ನಾಗಿ ಮಾಡುತ್ತಾರೆಂಬುದು ಶುದ್ಧ ಸುಳ್ಳಂತೆ.

* * *

ರಿಬ್ಬನ್‌ಟ್ರಾಫ್‌ನನ್ನು ಗಲ್ಲಿಗೆ ಹಾಕಿದರು ಎಂಬ ಸುದ್ದಿಯನ್ನು ಕೇಳಿದಾಗ ಚರ್ಚಿಲ್ಲನು ತನ್ನ ಕುತ್ತಿಗೆ ಸವರಿಕೊಂಡನಂತೆ.

* * *

ಹಿಂದೂ ಮುಸಲ್ಮಾನ್ ಜಗಳದಲ್ಲಿ--ಹಿಂದುಳಿದವನೇ ಎರಡು ಜಾಗ ಗಿಟ್ಟಿಸಿ ಕೊಂಡನಂತೆ.

* * *

ಅಮೇರಿಕಾದ ಮುಂದಿನ ಚುನಾವಣೆಯಲ್ಲಿ— ಯೆಹೂದ್ಯರ ಬೆಂಬಲ ದೊರೆಕಿಸಿಕೊಳ್ಳುವುದಕ್ಕೂ—

ಪ್ಯಾಲಸ್ಟೈನಿನಲ್ಲಿ ನೂರು ಸಾವಿರ ಯೆಹೂದ್ಯರಿಗೆ ನೆಲೆಸಲು ಸೌಕರ್ಯವಾಗಬೇಕೆಂದು ಟ್ರೂಮನ್ನನು ಹೇಳುವುದಕ್ಕೂ ಏನೂ ಸಂಬಂಧವಿಲ್ಲವಂತೆ.

* * *

ಗಡಿನಾಡಿಗೆ ಪಂಡಿತ ನೆಹ್ರೂರವರು ಹೋದಾಗ ಅಲ್ಲಿ ಅವರ ವಿಮಾನಕ್ಕೆ ಗುಂಡಿನೇಟು ಬಿದ್ದಿತೆಂಬ ಸುದ್ದಿ ಬಂದಾಗ...

—ಮಸೀದಿಗಳಲ್ಲೆಲ್ಲಾ ನೆಹ್ರೂ ಸುರಕ್ಷಿತವಾಗಿ ಬರಲಿ, ಎಂದು ಪ್ರಾರ್ಥನೆಗಳಾದುವಂತೆ—ತಮ್ಮ ಭಾವೀ ಹಿತರಕ್ಷಣೆಗಾಗಿ ಅಲ್ಲವೇ ಪ್ರಾರ್ಥನೆ !

* * *

ಮಲಯಾಳದಲ್ಲಿ ಸ್ತ್ರೀ ಸ್ವಾತಂತ್ರ ಎಷ್ಟರಮಟ್ಟಿಗೆ ಅನ್ನುತ್ತೀರಿ—

—ಅಲ್ಲಿ ಒಂದು ಮುತ್ತನ್ನೂ ಕೂಡ—ಗಂಡಸಿನೊಡನೆ ಸಮ ಹಂಚಿಕೊಳ್ಳುತ್ತಾರಂತೆ.

* * *

ಸಾಹಿತ್ಯ ಪರಿಷತ್ತಿನಲ್ಲಿ ದೀಪಾವಳಿ ಉತ್ಸವ ಸಲುವಾಗಿ ಬಾಯಿಚಟಾಕಿ ಹಾರಿಸುತ್ತಾರಂತೆ—

—ಪಾಪ ! ಸಾಹಿತಿಗಳು ಇನ್ನೇನುತಾನೇ ಮಾಡಿಯಾರು ?

* * *

ಅಣುಚ್ಛೇದನ ಶಕ್ತಿಯು ಸೌದೆಗೆ ಬದಲಾಗಿ ಉಪಯೋಗಿಸಬಹುದು ಪತ್ರಿಕೆ—

—ಏನು ಪ್ರಯೋಜನ—ಎರಡೂ ಸಿಗುವುದಿಲ್ಲವಲ್ಲಾ !

* * *

ನಿಮ್ಮ ಸ್ನೇಹಿತರ ಮೇಜಿನ ಮೇಲಿರುವ ಪುಸ್ತಕಗಳನ್ನು ನೋಡಿದರೆ—ಅವರೆಂತಹವರು ಎಂದು ತಿಳಿಯುತ್ತದೆ—(ಪತ್ರಿಕೆ)

—ಆ ಪುಸ್ತಕಗಳು ನಿಮ್ಮದೇ ಆಗಿದ್ದರೆ ಬೇಗನೇ ತಿಳಿಯುತ್ತದೆ—

* * *

— o —

ಉರಿಗಾಳು

ತಮಿಳು ನಟನಟಿಯರು ತೆಲುಗು ಚಿತ್ರರಂಗಕ್ಕೆ ನುಗ್ಗಿದ್ದಾರೆ (ಸುದ್ದಿ).... ಹಾಗಾದರೆ, ಇನ್ನು ಕನ್ನಡ ಚಿತ್ರಗಳು ಜನಪ್ರಿಯವಾಗುತ್ತವೆ.

* * *

" ಬಡವರ ಪ್ರಾರ್ಥನೆ ನೇರವಾಗಿ ದೇವರನ್ನು ಮುಟ್ಟುತ್ತದೆ'' (ಮಂತ್ರಿಗಳ ಭಾಷಣ)........... ಆದರೆ, ದೇವರು ಕೊಡುವ ಉತ್ತರ ಮಾತ್ರ ನೇರವಾಗಿ ಬಡವರ ಕೈ ಸೇರುವುದಿಲ್ಲ.

* * *

" ವಿಮಾನ ಪ್ರಯಾಣದ ಛಾರ್ಜು ಇಷ್ಟರಲ್ಲೇ ಇಂಡಿಯಾದಲ್ಲಿ ಮೈಲಿಗೆ ಮೂರಾಣೆ ಆಗಬಹುದು" (ಅಧಿಕಾರಿಗಳೊಬ್ಬರ ಭಾಷಣ) .... ಹಾಗಾದರೆ, ಆವಾಗ, ಒಂದು ಮೈಲಿ ದೂರ ಪ್ರಯಾಣ ಮಾಡಬೇಕು.

* * *

ತಿರುಪತಿಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾದರೆ, ವಿದ್ಯಾರ್ಥಿಗಳು ಪಾಸಾಗುವುದೇ ಅಸಂಭವ ಎಂಬ ಭೀತಿ ಆಗಲೇ ತಲೆದೋರಿದೆ.

* * *

ರೋಸನ್‌ಬರ್ಗ್, ರಿಬ್ಬನ್ ಟ್ರಾಪ್ ಮುಂತಾದ ಜರ್ಮನ್ ಅಧಿಕಾರಿಗಳನ್ನು ಗಲ್ಲಿಗೇರಿಸಿದ್ದರಿಂದ, ಪ್ರಮುಖ ರಾಷ್ಟ್ರಗಳ ಉನ್ನತಾಧಿಕಾರಿಗಳು ಮುಂದಿನ ಯುದ್ಧವನ್ನು ತಾವು ಗೆದ್ದೇಬಿಡಬೇಕೆಂದು ತೀರ್ಮಾನಿಸಿರುವರಂತೆ.

* * *

ಡಿಲ್ಲಿಯ ಭಂಗಿ ಕಾಲೊನಿಗೂ, ಬರೋಡಾ ಹೌಸಿಗೂ ನಡುವೆ ಇರುವ ರಸ್ತೆಗೆ ಭೋಪಾಲ್ ನವಾಬ್ ರೋಡ್ ಎಂದು ಹೆಸರಿಡಲು ಸೂಚನೆ ಬಂದಿದೆಯಂತೆ.

* * *

ಬ್ರಿಟಿಷ್ ಇಂಡಿಯಾದಲ್ಲಿ ದಿವಾನ್-ಬಹದ್ದೂರ್, ರಾವ್ ಬಹದ್ದೂರ್, ಖಾನ್ ಸಾಹೇಬ್ ಮುಂತಾದ ಎಲ್ಲ ಬಿರುದುಗಳನ್ನೂ ಇನ್ನುಮೇಲೆ ಹಂಚುವು ದಿಲ್ಲವೆಂದು ನಿರ್ಧರಿಸಿರುವುದಕ್ಕೆ ಕಾಗದದ ಅಭಾವ ಕಾರಣವಲ್ಲವಂತೆ.

* * *

"ನಿಮ್ಮ ಪಕ್ಷದವರಿಗೆ ಸದಾ ಬಾಗಿಲು ತೆರೆದೇ ಇರುತ್ತದೆ" (ಭಾಷಣ).... ಆದ್ದರಿಂದಲೇ, ವಾಕ್‌ಔಟ್ ಮಾಡುತ್ತಾರೆ

* * *

ಜನರಲ್ ಸ್ಟಿಲ್‌ವೆಲ್‌ರವರು, ಸತ್ತಮೇಲೂ ಸ್ಟಿಲ್ ವೆಲ್ ಅನ್ನಿಸಿಕೊಳ್ಳು ತ್ತಾರೆಯೇ, ಎಂದು ನಮ್ಮನ್ನೊಬ್ಬರು ಕೇಳಿದಾರೆ.

* * *

ಆಹಾರ ಪರಿಸ್ಥಿತಿ ಉಕ್ಕಡಾವಸ್ಥೆಯನ್ನು ದಾಟಿದೆ (ಪತ್ರಿಕೆ) ಹಾಗಾದರೆ ಇನ್ನು ಭಯವಿಲ್ಲ.

* * *

"ಈರೀತಿ ಹತ್ತಿ ಗಿರಣಿಗಳನ್ನೆಲ್ಲ ಮುಚ್ಚಿಸಿ, ಮನೆಗೆ ಒಂದಾಳು ವರ್ಷವೆಲ್ಲ ನೂಲುತ್ತಾ ಕೂತರೆ, ಪ್ರತಿ ಒಬ್ಬನಿಗೂ ನೂರುನೂರೆಳೆ ದಾರ ಸಿಗುತ್ತದೆ!" (ಪತ್ರಿಕೆ)....ಶೇಕಡ 96 ಜನಕ್ಕೆ ಈ ಸುದ್ದಿಯಿಂದ ಸಂತೋಷವಾಗಲಾರದು.

* * *

"ಚಲಚ್ಚಿತ್ರ ನಟಿಯರು ಅನೇಕರು ಹತ್ತಾರು ನಾಯಿಗಳನ್ನಿಟ್ಟುಕೊಂಡಿ ರುತ್ತಾರೆ." (ಮಾಸಿಕೆ)....ಅತೀ ಬೊಗಳುವಾಗ, ಬಾಯಿಗೆ ಒಂದೊಂದು ಕಡುಬು ಹಾಕುತ್ತಾರೆ, ಅಂತ ಕಾಣುತ್ತೆ.

* * *

"ಬಂಗಾಳಾ ಗವರ್ನರು ವಿಮಾನದಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಪಾರ್ಲಿಮೆಂಟಿಗೆ ವರದಿಯೊಪ್ಪಿಸಿದ್ದಾರೆ"—

—ಅಂತರಿಕ್ಷದಲ್ಲಿ ಎಲ್ಲವೂ ಶಾಂತವಾಗಿದೆಯಂತೆ.

* * *

—o—

ಚಂದೀ ಚುನಾವಣೆಗೆ ನಿಂತಿದ್ದು

—o—

ನಾವು ಸಿದ್ಧಪಟ್ಟಣಕ್ಕೆ ಸೇರಿದಾಗ ಆ ಊರಲ್ಲೆಲ್ಲಾ ಗುಲ್ಲೋ ಗುಲ್ಲು. ನಮ್ಮ ರಾಜ ವರ್ಣಿಸಿದ ಹಾಗೆ, ಅವನ ಮಗ ಏನಾದರೂ ತನ್ನ ಕ್ಯಾಟರ್‌ಬಿಲ್ ತಕೊಂಡು ಯಾವ ಮೂಲೆಯಿಂದಲಾದರೂ ಒಂದು ಸಣ್ಣ ಕಲ್ಲು ಬೀರಿದ್ದಾ ಅಂದರೆ ಅದು ಯಾರ ತಲೆಯಾದರೂ ಒಡೆಯಲೇ ಬೇಕು—ಅಷ್ಟು ಜನಸಂದಣಿ. ಅವತ್ತು ಸಿದ್ಧಪಟ್ಟಣದ ಮನೆಯೆಲ್ಲಾ ಖಾಲಿ. ಎಲ್ಲರೂ ಕೇರಾಫ್ ಪ್ಲಾಟ್ ಫಾರಂ.

ಅಲ್ಲಿ ಪ್ರ. ಪ್ರ. ಸಭೆ ಚುನಾವಣೆ. ಎಲ್ಲೆಲ್ಲಿ ನೋಡಿದರೂ ತರಹಾವರಿ ಬಾವುಟಗಳು. ಗಾಂಧೀಜೀ, ನೇತಾಜೀ, ನೆಹರೂ ಇವರುಗಳ ಪಠಗಳ ಮೆರವಣಿಗೆ, ಪರಾಕುಗಳು—ಲೆಖ್ಖವೇ ಇಲ್ಲ. ನಾನೂ ಮೊದಲು ಗಾಂಧೀಜೀ, ನೇತಾಜೀ, ಮತ್ತು ನೆಹರು ಇವರುಗಳು ಪ್ರ. ಪ್ರ. ಸಭೆ ಚುನಾವಣೆಗೆ ನಿಂತಿದ್ದಾರೆ ಅಂದುಕೊಂಡಿದ್ದೆ. ವಿಚಾರಿಸಿದ್ದಲ್ಲಿ ನನ್ನ ತಪ್ಪು ತಿಳಿಯಿತು.

ಆ ಊರಲ್ಲಿ ಐದು ಪಕ್ಷಗಳು. (ಆಮೇಲೆ ವಿಚಾರಿಸಿದ್ದಲ್ಲಿ ಇದು ನಿಜವೆಂದು ಗೊತ್ತಾಯಿತು. ಆ ಊರಲ್ಲಿ ಐದು ಗರಡಿ ಮನೆಗಳಿವೆ). ಒಂದೊಂದು ಪಕ್ಷದವರೂ ತಮ್ಮ ಮತವನ್ನು ಹೊಗಳುತ್ತಾ, ತಮ್ಮ ಮುಖಂಡರನ್ನು ಮೇಲೇರಿಸಿ, ಚುನಾಯಿಸುವುದಕ್ಕೆ ಜನರನ್ನು ಲೇವಡಿ ಎಬ್ಬಿಸುತ್ತಿದ್ದರು. ಅಷ್ಟರಲ್ಲೇ ನಮ್ಮ ಚಂದೀ ಮಾಯವಾಗಿದ್ದ. ಅದುವರಿವಿಗೂ ನಮ್ಮ ಜೊತೆಯಲ್ಲೇ ಇದ್ದ. ಆದರೆ ಕಾಲು ಘಂಟೆ ಮೇಲಾಗಿ ಅವನ ಸದ್ದೇ ನನಗೆ ಕೇಳಲಿಲ್ಲ. ಅನುಮಾನದಿಂದ ಸುತ್ತಲೂ ನೋಡಿದರೆ ಪರಾರಿ. ಅಷ್ಟರಲ್ಲಿ ಆ ಗಾಂಧೀಜೀ, ನೇತಾಜೀ, ನೆಹರೂರವರ ಮೆರವಣಿಗೆ ನಾವು ನಿಂತಿದ್ದೆಡೆಗೆ ಬಂತು. ರಾಜ ತಕ್ಷಣ ನನ್ನ ತೋಳನ್ನು ಬಿಗಿಹಿಡಿದ. ನನಗೂ ದಿಗ್ಭ್ರಮೆಯಾಯ್ತು. ನಮ್ಮ ಚಂದೀ ಒಂದು ಬಿಳೀ ನಿಲುವಂಗಿ, ಬಿಳೀಟೋಪಿ, ಹಣೆಗೆ ಕುಂಕುಮ ತೊಟ್ಟು, ಬಹಳ ಸಾಧುವಾಗಿ ಅದೇ ಮೆರವಣಿಗೆಯಲ್ಲೇ ಇದ್ದಾನೆ. ಅದೂ, ಸ್ವಲ್ಪ ಬಿಸಿಲೇರಿದ್ದರಿಂದ ಆ ಮೂವರ ಪಠಗಳ ನೆರಳಿನಲ್ಲೇ ಬರುತ್ತಿದ್ದಾನೆ. ನನಗೆ ದಿಗ್ಭ್ರಮೆಯಾದರೂ ಅವನ ಅವತಾರಗಳೆಲ್ಲಾ ತಿಳಿದಿದ್ದರಿಂದ ಸುಮ್ಮನಾದೆ. ಅವನೇ ಮುಂದೆ ಬಂದು ನನ್ನ ಕಿವಿಯಲ್ಲಿ ಸಮಾಚಾರ ಹೇಳಿದ. ಆ ಊರಲ್ಲಿ ಚಂದಿಯ ಸೋದರತ್ತೆ ಭಾವಮೈದುನನ ಮಗ ಚಂದ್ರಶೇಖರ ಗಾಂಧೀಜೀ ಟಿಕೆಟ್ ಮೇಲೆ ಚುನಾವಣೆಗೆ ನಿಂತಿದ್ದನಂತೆ. ಚಂದೀ ಆತನಿಗೆ ಹೇಗೋ ಸಮಝಾಯಿಸಿ, ಇಬ್ಬರ ಹೆಸರೂ ಒಂದೇ ಆದ್ದರಿಂದ ತಾನೇ ನಿಲ್ಲುವುದಾಗಿಯೂ, ತನ್ನ ಮಾತಿನ ಚಾತುರ್ಯದಿಂದ ಜನಗಳನ್ನೆಲ್ಲಾ ಡಂಗುಮಾಡಿ, ಚುನಾಯಿಸಿ

ಕೊಂಡು, ಆ ಸ್ಥಾನವನ್ನು ಆತನಿಗೆ ಬಿಡುವುದಾಗಿಯೂ ಕೌಲುಮಾಡಿಕೊಂಡ. ಇದಾದಮೇಲೇ ನಾವು ಕಂಡ ದೇಶೋದ್ಧಾರಕಾವತಾರ.

ಚಂದೀ ಮತ್ತೆ ಆ ಗುಂಪಿನಲ್ಲಿ ಅದೃಶ್ಯನಾದ. ಮೆರವಣಿಗೆ ಒಂದು ಮೈದಾನಕ್ಕೆ ಸೇರಿತು, ಬಾವುಟವೇರಿಸಿದ್ದಾಯಿತು. ಚಂದೀ ಗಾದಿಯನ್ನು ಹತ್ತಿ ತನ್ನ ಮುಂದೆ ಗಾಂಧೀಜೀಯವರನ್ನೂ, ಬಲಗಡೆ ನೆಹರೂರವರನ್ನೂ ಎಡಗಡೆ ನೇತಾಜೀಯವರನ್ನೂ ನಿಲ್ಲಿಸಿ ತನ್ನ ಭಾಷಣ ಷುರುಮಾಡಿದ.

"ಮಹನೀಯರೇ ಮತ್ತು ಮಹಿಳೆಯರೇ, ಇಂದು ಸಿದ್ಧಪಟ್ಟಣದ ಸುದಿವಸ. ಇಗೋ ಈ ಮೂವರು ಮಹಾತ್ಮರುಗಳು ನಿಮಗೆಲ್ಲಾ ತಿಳಿದವರೇ ಆಗಿದ್ದಾರೆ, ಇವರು ನಮ್ಮ ದೇಶಕ್ಕೆ ಎಷ್ಟು ಕಷ್ಟಪಟ್ಟಿದ್ದಾರೆ, ಪಡುತ್ತಿದ್ದಾರೆ ಅನ್ನುವುದು ನಿಮಗೆ ಗೊತ್ತೇ? (**ನಿಮಗೆ** ಗೊತ್ತೇನ್ರಿ?- - ಒಬ್ಬರ ಕೂಗು)— ನಮ್ಮ ಪಕ್ಷದವರು ಸದಾ ನಿಮ್ಮ ಸುಖ, ಅನುಕೂಲ ಇವುಗಳಲ್ಲೇ ನಿರತರಾಗಿದ್ದಾರೆ. (ಅಯ್ಯಾ—ನೀನೇನಾದರೂ ಒಂದು ದಿನ ಉಪವಾಸವಿದ್ದೀಯೇನಯ್ಯ? - - ಮತ್ತೊಬ್ಬರ ಕೂಗು) - - ಎಲ್ಲಿ, ಎಲ್ಲರೂ ಹೇಳಿ - ಮಹಾತ್ಮಾ ಗಾಂಧೀಕಿ ಜೈ...... .(ಕರತಾಡನ, ಕೂಗು, ಧಾಂ ಧೂಂ). ...."

ಧೂಳೆಲ್ಲಾ ಸ್ವಲ್ಪ ಇಳಿದಮೇಲೆ ನಾವು ನೋಡುವಾಗ್ಯೆ ಗಾದಿಯಮೇಲೆ ಚಂದೀ ಇರಲಿಲ್ಲ. ಯಾರೋ ಒಬ್ಬ ಮುದುಕ ಭಾಷಣಮಾಡುತ್ತಿದ್ದ.

"........ನನಗೇನೂ ನಿಮ್ಮ ಓಟು ಬೇಡ. ನಾನೂ ಈಗ ಇಪ್ಪತ್ತೈದು ವರ್ಷದಿಂದ ಈ ಚುನಾವಣೆಗಳನ್ನು ಚೆನ್ನಾಗಿ ಬಲ್ಲೆ. ಪ್ರತಿಸಾರಿ ಚುನಾವಣೆ ಬಂದಾಗಲೆಲ್ಲಾ ನಮಗೆ ಹೊಸ ಹೊಸ ಆಸೆ ತೋರಿಸಿ, ದೊಡ್ಡ ದೊಡ್ಡ ಮಹಾತ್ಮರುಗಳ ಹೆಸರು ಕೂಡ ಹೇಳೋಕೆ ತಿಳಿಯದವರು ನಮ್ಮನ್ನು ಪುಸಲಾಯಿಸಿ ಓಟು ತಕ್ಕೊಂಡ್ರು. ಓಟಿನ ದಿನವೇ ಅವರ ದರ್ಶನ. ಆಮೇಲೆ ಅವರೆಲ್ಲೋ, ನಮ್ಮ ಸುಖ, ಸೌಕರ್ಯವೆಲ್ಲೋ. ನಿಮಗೂ ಗೊತ್ತಿರಬಹುದು, ಈ ಊರಿನ ರಂಗಪ್ಪ, ಶಂಕರಯ್ಯ, ರಾಮಯ್ಯ, ತೆಂಗಿನ ತೋಪ್ ಕೆಂಚಪ್ಪ, ಹೇಮರೆಡ್ಡಿ, ಮುಂತಾದೋರೆಲ್ಲಾ ಹಿಂದೆ ಚುನಾಯಿಸಿಕೊಂಡು, ತಮ್ಮ ತಮ್ಮ ಮನೆಬಾಗಿಲುಗಳನ್ನೆಲ್ಲಾ ಭದ್ರಪಡಿಸಿಕೊಂಡು, ಈ ಊರಿನಲ್ಲಿ ಒಂದು ಚರಂಡಿ ಕೂಡ ಕಟ್ಟಿಸದೇ ಹೋಗಿದ್ದು. ನೀವು ಮಾತಿಗೆ ಬೆರಗಾಗಬೇಡಿ. ಇಲ್ಲಿ ಪಠಗಳಲ್ಲಿರೋ ಮಹಾತ್ಮರಿಗಲ್ಲಾ ನೀವು ಓಟುಕೊಡೋದು, ಅವರ ನೆರಳಿನಲ್ಲಿ ತಂಪಾಗಿ ಇರತಾರಲ್ಲಾ ಅವರಿಗೆ. ಸರಿಯಾಗಿ ಯೋಚಿಸಿ ...."

ಯಾರೋ ನನ್ನ ಕೈ ಹಿಡಿದಹಾಗಾಯಿತು. ಚಂದೀ ಯಥಾಪ್ರಕಾರ ತನ್ನ ಕಾಕೀಷರ್ಟು ನಿಕ್ಕರ್ ಧರಿಸಿ "ಲ್ರೋ, ಗುಗ್ಗುಗಳ್ರಾ, ಆ ಮುದುಕನ್ನೇನ್ರೋ ಕೇಳ್ತಿದ್ದೀರಾ?" ಅಂದು ಹಿಡಿದೆಳೆದ.

—ಕೇಫ.

ಅಮ್ಮನವರ ಜಂಬ

ರುದ್ರಾಕ್ಷಿಅಮ್ಮ ನಮ್ಮೂರ ಶಾಲಾ ಇನ್‌ಸ್ಪೆಕ್ಟರ್‌ರವರ ಪತ್ನಿ, ತುಂಬಾ ನಾಗರೀಕರು. ವೇಷ ಭೂಷಣಗಳೆಲ್ಲಾ ಅಪ್-ಟು-ಡೇಟ್. ವಯಸ್ಸು ಸಾಧಾರಣ ನಲ್ವತ್ತೈದರ ಹತ್ತಿರ- ಆದರೂ ಎಲ್ಲಾದರೂ ಹೊರಡುವ ವೇಳೆ ಕೈಯಲ್ಲಿ ಜಂಬದ ಚೀಲ, ಹೈ ಹೀಲ್ಡ್ ಷೂ, ಫೇನ್ಸಿ ಕೊಡೆ ತಪ್ಪುತ್ತಿದ್ದಿಲ್ಲ. ಟಾಯ್‌ಲೆಟ್ಸ್ ಒಂದು ಉಪಯೋಗಿಸುತ್ತಾರೆ, ಒಂದಿಲ್ಲ ಎನ್ನುವಂತಿಲ್ಲ. ತುಟಿಗೆ ಲಿಪ್‌ಸ್ಟಿಕ್ ತಪ್ಪಿಸುತ್ತಿದ್ದಿಲ್ಲ. ಗಾತ್ರ, ಗುಜ್ಜಾನೆ, ಗೋಷ್ಠಿಯೆಲ್ಲ ಹೈ ಸರ್ಕ್‌ಲಲ್ಲೇ, ಕ್ಲಬ್ಬಿಗೆ ಹೋಗುವುದು ಬರುವುದು, ಅವರಿವರ ಕಾರಲ್ಲಿ ಸವಾರಿ ಹೊಡೆಯುವುದು— ಯಾರಂತೆ.... ? ಇನ್‌ಸ್ಪೆಕ್ಟರವರ ಮಡದಿಯಂತೆ !

ಉಪಾಧ್ಯಾಯಿನಿಯರೆಂದರೆ ಅವರಿಗೆ ಅಷ್ಟೊಂದು ಒಗ್ಗದು. ಅದರಲ್ಲೂ ನಮ್ಮಂಥ ಬಡ ಮಿಸ್ಟ್ರೆಸ್‌ಗಳು ನಾಗರಿಕತೆಯನ್ನೇ ಅರಿಯದ, ಸೊಸೈಟಿಗೆ ಯೋಗ್ಯರಲ್ಲದ ಮೊರಡು ಜಂತುಗಳೆಂದೇ ಅವರ ಭಾವನೆ. ಪರಿಚಿತರಾದರೂ ಕಂಡೂ ಕಾಣದಂತೆ ಮುಖ ತಿರುಗಿಸಿ ತನ್ನ ಅಂತಸ್ತಿನ ಠೀವಿ ಪ್ರದರ್ಶಿಸುವ ಸ್ವಭಾವದವರು ಗಂಡನಿಗೆ ಬರುತ್ತಿದ್ದ ತಿಂಗಳ ಸಂಬಳಕ್ಕೂ ಈಕೆಯ ಶೃಂಗಾರದ ವೆಚ್ಚಕ್ಕೂ ಹೊಂದಿಕೆ ಇರಬಹುದೆ ಎಂದು ಹಲವರ ಸಂದೇಹ. ಏಕೆ ? ದೊಡ್ಡವರಲ್ಲವೆ ? ಅವರ ವ್ಯವಹಾರಗಳೆಲ್ಲಾ ಮುಕ್ಕಾಲು ಮೂರುಪಾಲು ಕ್ರೆಡಿಟ್ ಮೇಲೆ ನಡೆದರೂ ಸೊಸೈಟಿಯಲ್ಲಿ ಗಣ್ಯರಲ್ಲವೆ ?

ಶನಿವಾರ ನಮಗೆ ಅರ್ಧಹೊತ್ತು ಶಾಲೆ. ಸಾಯಂಕಾಲ ಜಲಜಮ್ಮ, ಅಂಬುಜಮ್ಮ, ನೀರಜಮ್ಮ, ನಾನು ಎಲ್ಲರೂ ಸೇರಿ ಗಾಳಿವಿಹಾರಕ್ಕೆ ಹೊರಡುವುದು—ಗಾಂಧಿ ಮೈದಾನಕ್ಕೆ—ಎಂದು ಹಿಂದಿನ ದಿನವೇ ನಿರ್ಧರಿಸಿದ್ದೆವು. ಹಾಗೆ ಹೊರಟವರು " ಸ್ವರಾಜ್ಯ ಕೆಫೆ " ಕಂಡಾಗ '' ಹೌದು, ಯಾವುದಕ್ಕು ಕಾಫಿ ಕುಡಿಯದೆ ಹೇಗೆ ಮುಂದೆ ಸಾಗೋದು '' ಅಂಬುಜಮ್ಮ ಸೂಚಿಸಿದರು. " ಅದಕ್ಕೇನಂತೆ, ನಡೀರಿ '' ಎಂದೇ ಬಿಟ್ಟರು ಜಲಜಮ್ಮ - ಬೇರೆ ಮಾತೇನು ? ಒಳ ನಡೆದೆವು. ಖಾದಿ ಬಟ್ಟೆ ಧರಿಸಿ ಗಾಂಧಿ ಟೋಪಿ ಮಡಗಿಕೊಂಡ ಕುಳ್ಳ ಮಾಣಿ ಬಂದು ತಿಂಡಿ ವಿಶೇಷಗಳ ಹೆಸರುಗಳನ್ನು ಒಂದೇ ಉಸುರಿನಲ್ಲಿ ಪಠನ ಮಾಡಿ ಸೊಂಟಕ್ಕೆ ಕೈ ಹಿಡಿದು ನಿಂತ. ' ಬಾಪೂಜಿ ಹಲ್ವ, ನೇತಾಜಿ ಕಜೂರ್, ರಾಜಾಜಿ ಸಾಂಬಾರ್, ಹಿಂದೂ ಮುಸ್ಲಿಂ ಮಿಕ್ಸ್‌ಚರ್, ಇತ್ಯಾದಿ ಇತ್ಯಾದಿ ನಾವು ಡಂಗು ಬಡಿದು ಒಬ್ಬರ ಮುಖ ಇನ್ನೊಬ್ಬರು ನೋಡುತ್ತಿರುವಾಗ

ವಡೆ ಸಾಂಬಾರ್' ಎಂದು ನಾನು ಬಾಯಿ ಎತ್ತಿದೆ. ಅಂಬುಜಮ್ಮನವರಿಗೆ ರೇಗಿತು. "ಏನ್ರಿ ಇದು, ಹೋದಲ್ಲಿ ಬಂದಲ್ಲಿ ಸಾಂಬಾರ್ ಎಂದು ಪ್ರಾಣ ಬಿಡುತ್ತೀರಿ"—ಎಂದು ಗೇಲಿ ಮಾಡುವಷ್ಟರಲ್ಲಿ ಕಾರೊಂದು ಬುರ್ರನೆ ಬಂದು ನಿಂತ ಸದ್ದಾಯಿತು. ಅರೆ ನಿಮಿಷದಲ್ಲಿ ಲಟಕ್ ಕುಟಕ್ ಶಬ್ದಮಾಡುತ್ತ ಕಿಲಕಿಲನೆ ನಗುತ್ತಾ ನಾಲ್ಕುಮಂದಿ ಮಹಿಳೆಯರು ಒಳ ಬಂದರು. ನಾವು ಕುಳಿತಿದ್ದ ಎದುರು ಮೇಜಿಯಲ್ಲಿ ಮಂಡಿಸಿದರು. ನೋಡುತ್ತೇವೆ ನಮ್ಮ ಇನ್‌ಸ್ಪೆಕ್ಟರವರ ಮಡದಿ ಅಲ್ಲೂ ಹಾಜರಿ. ನಮ್ಮನ್ನು ಕಂಡೊಡನೆ ಸಿಡುಕುಮೋರೆ ಮಾಡಿ ಅವರ ಮಾತು ನಮಗೆ ತಿಳಿಯಬಾರದೆಂದು ಪಿಸುಗುಸ ಸಂಭಾಷಿಸ ತೊಡಗಿದರು. ಅವರಲ್ಲೊಬ್ಬಳು ಅಂಗೈಯಷ್ಟು ಅಗಲದ ತೂಗುವಾಲೆ ತೊಟ್ಟಿದ್ದಳು. ಯಾರೊ ಸಿನಿಮಾ ನಟಿ.

ಕೂಲ್ ಡ್ರಿಂಕ್ ಮಾತ್ರ ಸಾಕೆಂದು ನಟಿ—'ಇಲ್ಲ ಇಲ್ಲ ಸ್ವಲ್ಪ ಸೊಲಿಡ್' ಎಂದು ಅಮ್ಮನವರ ಒತ್ತಾಯ. "ಸ್ವೀಟ್ ಏನು ಸ್ಪೆಷಲ್ ಈದಿನ?' ಅಧಿಕಾರ ವಾಣಿಯಿಂದ ಪ್ರಶ್ನಿಸಿದರು ಮಾಣಿಯನ್ನು—ಸರಿ, ಬಾಪೂಜಿ ಹಲ್ವ....ನೇತಾಜಿ ಕಜೂರ್....ಪಾಕಿಸ್ಥಾನ್ ಕ್ರಷ್....ಕ್ವಿಕ್" ಅಮ್ಮನವರ ಆರ್ಡರ್ ಹೋಯಿತು

ತಿಂದು ಕುಡಿದು ಮುಗಿಯಿತು, ಬಿಲ್ ಬಂತು. ಹಣ ಯಾರು ಕೊಡುವುದು ಅಂತ? ನಟಿ ಕೊಟ್ಟಾಳೆಂದು ಅಮ್ಮನವರ ಧೈರ್ಯ. ನೀವು ಕೊಡಿ ಅನ್ನೋದು ಗೌರವಕ್ಕೆ ಕಡಿಮೆ. ಆರ್ಡರ್ ಮಾಡಿದ್ದಾರಂತೆ, ಹಣ ಇರಲೇಬೇಕೆಂದು ನಟಿಯ ಧೈರ್ಯ. ಧರ್ಮಸಂಕಟಕ್ಕೆ ಬಿತ್ತಲ್ಲಾ ಎಂದು ತಡಕಾಡುತ್ತ ಪರ್ಸ್ ತೆರೆದು ನೋಡುತ್ತಾರೆ. ನಾಲ್ಕಾಣೆ ಪಾವಲಿ ಕಂಡಿತು ಮಾತ್ರ—ಅಮ್ಮನವರ ಜಂಬದ ಚೀಲದಲ್ಲಿ. ಮರ್ಯಾದೆ ಹೋಗುವ ಸಂದರ್ಭ ಬಂತಲ್ಲಾ ಎಂದು ಅಮ್ಮನವರಿಗೆ ಗಲಿಬಿಲಿಯಾಯಿತು. ನಟಿಯ ಚೀಲದಲ್ಲಿ—ಎಂಟಾಣೆ ಪಾವಲಿ ಒಂದಾಣೆ ಚಿಲ್ಲರೆ ಮಿಕ್ಕಿತ್ತು—ಇನ್ನೂರು ಇನ್ನೂರೈವತ್ತು ರೂಪಾಯಿ ಜವಳಿ ಕೊಂಡುಕೊಂಡು ಉಳಿದಿದ್ದರಲ್ಲಿ.

ಅಭಿಮಾನ ಭಂಗವಾಯಿತೆಂದು ಅಮ್ಮನವರು ಹುಬ್ಬು ಗಂಟಿಕ್ಕಿ ಸೊಟ್ಟ ಮೋರೆ ಮಾಡಿ ಸುತ್ತಲೂ ನೋಡಿ ಕೊನೆಗೆ ಉಪಾಯವಿಲ್ಲದೆ ಮೆಲ್ಲಗೆ ನಮ್ಮ ಮೇಜಿನಬಳಿ ಸರಿದು ತಮ್ಮ ಜಂಬದ ಪರ್ಸನ್ನು ತೆರೆದು, ಅಂಬುಜಮ್ಮನವರ ಕಿವಿಯಲ್ಲಿ ಏನೋ ಉಸುರಿದರು. 'ಛೆ, ಅದರಲ್ಲೇನಂತೆ' ಎಂದವರೆ ಅಂಬುಜಮ್ಮ, ಆ ಪರ್ಸಿನ ಮೂಲೆಯಲ್ಲೇ ಅಡಗಿ ಕೂತಿದ್ದ ಎರಡು ರೂಪಾಯಿ ನೋಟನ್ನು 'ನಿಮ್ಮಲ್ಲಿ ಇಲ್ಲದಾಗ ಕೇಳಿ' ಎಂದು ಅವರ ಕೈಲಿಟ್ಟರು! ಪಾಪ! ವೃಥಾ ಮಾನಭಂಗವಾಯಿತು, ಅಮ್ಮನವರಿಗೆ.

—ಮೂಲ್ಕಿ.

ಬಾ ಬು

—o—

(ಬಿನ್ನಹಕೆ ಬಾಯಿಲ್ಲವಯ್ಯ,—ಎಂಬಂತೆ)

ತಿನ್ನಲಿಕೆ ಕೂಳಿಲ್ಲವಯ್ಯ
ಅನಂತ ಅಪರಾಧ ಎಮ್ಮೊಳಗೆ ಇರಲಾಗಿ ||

ಪಶು ಮೋಹ ಮನೆ ಮೋಹ ಮಡದಿ ಮೋಟರ ಮೋಹ
ರಸಿಕ ಭ್ರಾತಲ ಮೋಹ ಲಾಭ ಮೋಹಾ ||

ಋಷಿ ಮೋಹ ಸೀ ಮೋಹ ತಿಂದ ಗರ್ವದ ಮೋಹ
ಹಸಿವಾರಿ, ನಿನ್ನ ಮರೆತೆನೊ, ಅಕಟ, ಕಾಯೋ ||

ಡಿಪ್ಲೊಮದವರ್ಧಮದವಖಿಳ ವೈಭವದ ಮದ
ತಪ್ಪು ಲೆಕ್ಕದ ಕೂಪನಿರುವ ಮದವೋ ||

ತನ್ನ ನಿತ್ಯದಾ ಪಡಿ ಖಾತ್ರಿವಶವಾದ ಮದ
ಇನ್ನು ತನಗೆದುರಿಲ್ಲವೆಂತೆಂಬೊ ಮದದಿಂದ ||

ಇಷ್ಟು ಸಕ್ಕರೆಗೇ ಮತ್ತಿಷ್ಟು ಸೇರಿಸುವಾಸೆ
ಅಷ್ಟು ದೊರಕಿದರೆ, ಅದ ಮಾರುವಾಸೆ ||
ಕಷ್ಟಪಡದುಂಬಾಸೆ ಕರಿ ಪೇಟೆ ಕಾಂಬಾಸೆ
ವೃಷ್ಟ ಭೋಜನದಾಸೆ, ರಾಜೇಂದ್ರ ಮಂತ್ರೀ ||

—ಬಿ. ಸ್ವಾ., ಪಾಟೂಳಿ

—o—

ಎತ್ತಿದ ಕೈ

(ಪುಸ್ತಕ ವಿಮರ್ಶೆ)

" ಎತ್ತಿದ ಕೈ " (ಹತ್ತು ಏಕಾಂಕ ನಾಟಕಗಳ ಸಂಗ್ರಹ) ಬರೆದವರು : ರಂ. ಶ್ರೀ. ಮುಗಳಿ, ಮನೋಹರ ಗ್ರಂಥಮಾಲೆಯ ೭೮ನೆಯ ಕುಸುಮ—1946. ಬೆಲೆ 1-14-0 ಧಾರವಾಡ.

'ನನ್ನ ಈ ಸಂಗ್ರಹವು ಯಾವ ಮಟ್ಟದ್ದೆಂಬುದನ್ನು ಸಹೃದಯರು ನೋಡಲಿ, ಹೇಳಲಿ' ಎಂದು ಶ್ರೀ ಮುಗಳಿಯವರು ಮೊದಲ ಮಾತಿನಲ್ಲಿ ಕೇಳಿಕೊಂಡಿದ್ದಾರೆ. ಹೇಳುತ್ತೇವೆ. ಇದರಲ್ಲಿ ಅಚ್ಚಾಗಿರುವ ಹತ್ತು ಏಕಾಂಕ ನಾಟಕಗಳ ಪೈಕಿ ಕೆಲವೆಲ್ಲ ಅರ್ಧವಿರಾಮದಲ್ಲೇ ಮುಕ್ತಾಯವಾಗುತ್ತವೆ. 'ಎತ್ತಿದ ಕೈ' ಇಳಿಯುವುದೇ ಇಲ್ಲ; ಅಷ್ಟರೊಳಗೆ ತೆರೆ ಬಿದ್ದುಬಿಡುತ್ತದೆ. 'ಕೂಡಲಾರದ ಕಣ್ಣಿ'ನಲ್ಲಿ 'ನನ್ನ ಜೀವಕ್ಕ ಸಾಕಾಗೇದ, ತಾಯಿ' ಎಂದು ನಾಯಕಿ ಹೇಳುತ್ತಿರುವಾಗಲೇ ತೆರೆ ಬೀಳುತ್ತದೆ. 'ಮೋಟಾರ ಮಾರಿಕಾ'ದಲ್ಲಿ, ನಡುದಾರಿಯಲ್ಲಿ ಬಡಿದ ಒಂದು ಮೋಟಾರ್ ಅನಾಹುತದಿಂದ ಕಂಗೆಟ್ಟ ಕೆಲವು ಪ್ರಯಾಣಿಕರ ಪಾಡನ್ನು ಬಹಳ ಚಮತ್ಕಾರದಿಂದ ರಂಗಸ್ಥಳಕ್ಕೆ ತಂದಿದಾರೆ. ಆದರೆ, 'ಎಲ್ಲಾರೂ ಇನ್ನ ಮೋಟರ ಮಾರಿಕಾಂಬಾ ಪ್ರಸನ್ನ ಅಂತ ಕೈ ಮುಗದು ಗಲ್ಲಗಲ್ಲ ಬಡಕೊಂಡು ಧ್ಯಾನಮಾಡಿಕೋತ ಕೂಡರಿ' ಎಂಬಲ್ಲಿಗೆ ಸಮಾಪ್ತಿ. ಇಪ್ಪತ್ತು ನಿಮಿಷದ 'ಓಲೇ ಚೀಲ' ತಾರಾಡಿ ತೂರಾಡಿ 'ಸೋ ಫಾರ್ ಸೋ ಗುಡ್' ಎಂದು ಮುಗಿಯುತ್ತದೆ. ಹತ್ತು ನಿಮಿಷದ 'ಭ್ರಮರದ ಓದಿ'ನಲ್ಲಿ ಒಬ್ಬೊಬ್ಬರು ಟೇಬಲ್ಲಿನ ಮೇಲೆ ತಲೆಯಾನಿಸಿಕೊಂಡು ಮಲಗುತ್ತಾರೆ....ಇವೆಲ್ಲ ಶ್ರೀ ಮುಗಳಿಯವರ ಲೇಖನಿಯಿಂದ ಸಿಡಿದ ಮಸಿಯ ಹನಿಗಳು!

ಉಳಿದ ಏಕಾಂಕಗಳಲ್ಲಿ 'ವಿದ್ಯಾವತಿ' ಪರವಾಗಿಲ್ಲ; 'ಅತಿಥಿದೇವರು' ಆದರಣೀಯ; 'ಏಕೀಕರಣ'ದಲ್ಲಿ ಕೊಂಚ ಅಸಹಜತೆಯಿದ್ದರೂ, ಅದು ಮೆಚ್ಚತಕ್ಕದ್ದು; 'ಹಾಡಿನ ಹುಚ್ಚು' ಚೆನ್ನಾಗಿದೆ, 'ಪಾಲಿನ ಕೊಳ್ಳಿ'—ಕನ್ನಡ ಏಕಾಂಕ ನಾಟಕಗಳ ಮನ್ನಣೆಯಲ್ಲಿ ಬೆಳಗುವಂಥದ್ದು; ಅತ್ಯುತ್ತಮ ನಾಟಕ.

ಶ್ರೀ ಮುಗಳಿಯವರ ನಾಟಕಗಳು ರಂಗಪ್ರದರ್ಶನಕ್ಕೆ ಅನುಕೂಲವಾಗಿವೆ. ಅವರ ತಿಳಿಹಾಸ್ಯವು ಬೆಳುದಿಂಗಳಂತೆ ಅವರ ಕಟುವಾದ ಟೀಕೆಗಳಿಗೆ ತಂಪು ನೀಡುತ್ತವೆ............" ನಿನ್ನ ಮಾಸ್ತರು ಯಾರು?"...." ನನ್ನ ತಲಿ", " ಈಗ ಮೆಕ್ಯಾನಿಕ ಆಗಿ ಕಿಲ್ನರ ಅಂತ, ನಾಳೆ ಡ್ರಾಯವರ, ನಾಡದು ಸ್ವಂತ ಮೋಟರಿನ

ಓನರ! ಮುಂದ ಮುನಿಸಿಪಾಲಿಟಿ ಪ್ರೆಸಿಡೆಂಟಿ ಸೈತ ಆಗಬಹುದು"; "ನೆಟ್ಟಗೆ ಕಲಿಯೋದು ಬಿಟ್ಟು ಉತ್ಪನ್ನದ ಅಂತ ಊಟಮಾಡಿ ಕಾಲ ಚಾಚಿಕೊಂಡು ಬಾಜೀರಾಯನಂಗ ಕೂತಿರಿ"; "ಮದವಿ ಮಾಡಿ ಮಾಸ್ತರ್ನ ಇಟ್ಟಂಗಾತು"; "ಹಿಂಗೆ ಇವು ಓದಿ ಓದಿ ಬಿ ಎ ಎಮ್ಮೆ ಆಗಿ ಕಡೀಕ ಗಂಡಂದಿರು ಸಿಗದ್ಹಾಂಗ ಎಲ್ಲೆ ಅಗತಾವೊ ಏನೊ! ಮತ್ತೇನದ?"....ಇಂಥವು ನೂರಾರಿವೆ.

ಈ ನಾಟಕಗಳನ್ನಾಡಲು ಪ್ರಕಾಶಕರಾಗಲಿ ಶ್ರೀ ಮುಗಳಿಯವರಾಗಲಿ ಯಾವ ರುಸುಮನ್ನೂ ತಲಪಿಸಬೇಕೆಂದು ವಿಧಿಸಿಲ್ಲವಾದ್ದರಿಂದ, ಶಾಲಾ ವಿದ್ಯಾರ್ಥಿಗಳು 'ಪಾಲಿನ ಕೊಳ್ಳಿ' 'ಏಕೀಕರಣ' ಮುಂತಾದವುಗಳನ್ನೂ ವಿದ್ಯಾರ್ಥಿನಿಯರು 'ವಿದ್ಯಾವತಿ' 'ಹಾಡಿನ ಹುಚ್ಚು' ಮುಂತಾದವುಗಳನ್ನೂ ಕಲಿತು ಆಡಬಹುದು. ಧಾರವಾಡ ಪ್ರಾಂತದ ಕನ್ನಡವೆಂದು ಹಿಂಜರಿಯಬಾರದು. ಅದನ್ನೇ ಉಳಿಸಿಕೊಂಡು ಪ್ರಯೋಗಿಸುವುದೇ ಉತ್ತಮ. ಮೈಸೂರು ಪ್ರಾಂತದ ಜನರಿಗೆ ಆ ಮಾತುಗಳು ಪರಿಚಯವಾಗಲಿ. ಅದರಿಂದ ಬಾಧಕವಿಲ್ಲ.

—ಕನ್ನಡಂ.

—— o ——

ಗಡಿನಾಡಿನಲ್ಲಿ ಬಾಂಬು ಹಾಕಿದ್ದನ್ನು ಕಂಡು - ಮುಸ್ಲಿಂ ಲೀಗ್ ಹೇಳಿದಂತೆ— 'ತಾತ್ಕಾಲಿಕ ಸರ್ಕಾರ ಬಾಂಬು ಹಾಕಿಸಿದ್ದು' ಎಂದು ; ಫಾರ್‌ವರ್ಡ್ ಬ್ಲಾಕಿನವರಂದರಂತೆ– 'ಅಲ್ಲಿ ಸುಭಾಷರಿದ್ದಾರೆ ಇದು ಇಂಗ್ಲೀಷರ ಕೆಲಸ' ಎಂದು. ಕಮ್ಯೂನಿಷ್ಟರು ಅಂದರಂತೆ– "ಇದು ಹಣವಂತರ ಕೃತ್ಯ– ಸ್ಟಾಲಿನ್ನಗೆ ಹೇಳಬೇಕು" ಎಂದು. ನೆಹರೂ ಪ್ರಧಾನಾಮಾತ್ಯರಾದಕೂಡಲೆ ಹೇಳಿದರಂತೆ—'ಬಾಂಬು ಹಾಕುವುದನ್ನು ನಿಲ್ಲಿಸಿ' ಎಂದು.

★ ★ ★

'ನವೆಂಬರ್ ೧೫ಕ್ಕೆ ನಮ್ಮ ಆಹಾರ ದಾಸ್ತಾನು ಮುಗಿಯುತ್ತೆ' ಎಂದು ಆಹಾರಾಧಿಕಾರಿಗಳು ಹೇಳಿದರಂತೆ.

—ಅಲ್ಲಿನ ತನಕ ಈ ಜೋಳ ತಿನ್ನಬೇಕಲ್ಲಪ್ಪಾ – ಈಗಿನಿಂದಲೇ ಉಪವಾಸ ಹಾಕಬಾರದಾಗಿತ್ತಾ, ಎಂದು ಮಂಡಿ ನೀವುತ್ತಾ ಒಬ್ಬ ರೋಗಿ ಹೇಳಿದನಂತೆ,

★ ★ ★

ಈ ಸಾರಿ ಮಹಾಲಯ ಅಮಾವಾಸ್ಯೆ ಎರಡು ದಿನ

—ದಸರಾಕ್ಕೆ ಜವಳಿ ಇಲ್ಲದಿದ್ದರೂ ಅವಳಿ ಅಮಾವಾಸ್ಯೆಯೇ ?

★ ★ ★

ಕಲಿಗನ್ನಡ ಸ್ಪರ್ಧೆ

(ಅಪೂರ್ಣ ಪದದಲ್ಲಿ ಖಾಲಿ ಜಾಗವನ್ನು ಭರ್ತಿಸಿ)

(7ನೆಯದರಲ್ಲಿ ಬಿಟ್ಟಿರುವುದನ್ನು ಪತ್ತೆಹಚ್ಚಿ ಭರ್ತಿ ಮಾಡಿ)

1. ಸೆಕ್ರಿಟೇರಿಯಟ್ ನೌಕರರಿಗೆ, ಮಧ್ಯಾನ್ಹದಹೊತ್ತು ಉದ್ದಿನ ಒಡೆ, ದೋಸೆ (ಹೆಸರು !) ಇತ್ಯಾದಿ ತಿಂದು ತಿಗಣೆಗಳಾಗಲೆಂದು ಸರ್ಕಾರದವರು **"ತು__ಭತ್ಯ"** ವನ್ನು ಕೊಡುತ್ತಿರುವರು.

2. "ಮಳೆ ಬಿದ್ದು, ಬೆಳೆ ಎದ್ದು, ಬರ ಹೋಗಿ, ಬೆಣ್ಣೆ ಬೆಲೆ ಇಳಿದರೆ ಬೇಕಾದ್ದ ಬಯಸು, ಬಡಿಸುವೆನು — ರವಿನಾಯಕಾ"' ಎನ್ನುತ್ತಾ ಅನೇಕರು ಈ ವರ್ಷ ಗಣೇಶನನ್ನು (ಮುಳುಗಿಸಿ ಅಲ್ಲ) ತೇಲಿಸಿದರಂತೆ.

3. ಅಸೆಂಬ್ಲಿ, ಮುನಿಸಿಪಾಲಿಟಿ, ಕಾಂಗ್ರೆಸ್ಸು ಇತ್ಯಾದಿ ಎಲೆಕ್ಷನ್ ಗಲಾಟೆಗಳ ಸಮಯಕ್ಕೆ ಸರಿಯಾಗಿ ಒಂದು ನಾಟಕದ ಕಂಪನಿಯವರು, ಜನಗಳ ಧನ ಮನಗಳನ್ನು ಸೆಳೆಯಲು 'ಕುರಿಕ್ಷೇತ್ರ' ವೆಂಬ ಒಂದು "—ಲೆಕ್ಷನ್" ನಾಟಕವನ್ನಾಡಿದರು. (ವಿ. ಸೂ: ಕುರಿ=ಚುನಾವಣೆಗೆ ನಿಂತ ಸ್ಪರ್ಧಿ)

4. ಭಾಷಣವನ್ನು ಮುಂದುವರಿಸುತ್ತಾ ಶ್ರೀಮಾನ್........ರವರು, ಈಚೆಗೆ ಸರ್ಕಾರದವರು ಕೈಕೊಂಡಿರುವ ಭಾರೀ ಖರ್ಚಿನ ಕೆಲವು ಯೋಜನೆಗಳ ಬಗ್ಗೆ ಸರ್ಕಾರವನ್ನು ಬಹಳ ಸ್ವಾರಸ್ಯವಾಗಿ "ಅಭಿ—ಂದಿಸಿದರು".

5. ಒಬ್ಬಾನೊಬ್ಬನು ಹೊಟ್ಟೆಗಿಲ್ಲದೆ ಸುಸ್ತಾಗಿ, ಒಂದು ತರಹ ನಿದ್ದೆ ಬಂದು, ಮಾತನಾಡಲಾರದೆ, ಮನಸ್ಸಿನಲ್ಲೇ ಭಗವಂತನನ್ನು ಧ್ಯಾನಮಾಡುತ್ತಾ, ನಿದ್ರೆಯಲ್ಲಿ "—ರವಶನಾದನು".

6. ಕೆಳಗುಮಾಸ್ತೆ ಮೇಲಕ್ಕೆ ಮೆಮೋ ಹಾಕುತ್ತಾ, ಅರ್ಥವಾಗದ ಭಾಗವನ್ನು ಅರ್ಥ ಮಾಡಿಕೊಳ್ಳಲೋಸುಗ (ಅರೆಬರೆದ ಮೆಮೋ ಮುಚ್ಚಿಟ್ಟು), ಅರ್ಧ ಕಾಫಿಗಾಗಿ, ಹೊರಬೀಳುವಾಗ ಮೆಮೋಗೆ ಹಾಕುವ ಕಾಮಾ: "ಅ—ನ ವಿರಾಮ".

7. ಯಾವಾಗಲೂ ಹಳೇ ರಿಕಾರ್ಡುಗಳನ್ನೇ ಹುಡುಕಿಕೊಂಡು ದಫ್ತರದ ರೂಮಿನಲ್ಲೇ ಇರುವವನನ್ನು "ದಫ್ತರ್ ಬಂದಿ" ಎಂದು ಕರೆಯುತ್ತಾರೆ.

—ಟೀಯಸ್ಸಾರ್ರಾವ್.

(ಸರಿಯಾದ ಉತ್ತರಕ್ಕೆ ಕೊನೇ ಪುಟ ನೋಡಿ.)

ದಲ್ಲೂ ಬರಗಾಲ ಬರುವುದೆಂದರೇನು? ಆದರೂ. ಬಂತು. ರಾಮ ರಾಜ್ಯದ ಅಧಿಕಾರಿಗಳೆಲ್ಲ "ಜನಸಾಮಾನ್ಯರ ಜವಾನ"ರು. ಅವರ ಪ್ರಜಾ ಸೇವಾತತ್ಪರತೆ ಅಪಾರ; ಬುದ್ಧಿಶಕ್ತಿಯೂ ಅಷ್ಟೆ. ಅವರು ಜನನಾಯಕರ ಸ್ಥಾನದಲ್ಲಿ ನಿಂತರು. ಹೊರದೇಶಗಳಿಂದ ಆಹಾರ ತರಿಸುವುದು ದುಸ್ತರ, ತಮ್ಮ ನಾಡಿನಲ್ಲೇ ತಾವು ಆಹಾರ ಸಾಮುಗ್ರಿಗಳನ್ನು ಬೆಳೆಸಬೇಕೆಂದು ಮನ ಗಂಡರು. "ಹೆಚ್ಚು ಆಹಾರ ಬೆಳೆಸಿರಿ" ಎಂಬ ಘೋಷಣೆಯಿಂದ, ಹೇಗೆ ಬೆಳಸುವುದೆಂಬ ಭಾಷಣಗಳಿಂದ, ರುಚಿರುಚಿಯಾದ ಹಣ್ಣು ಹಂಪಲುಗಳ ಚಿತ್ರ ಪ್ರದರ್ಶನಗಳಿಂದ ಜನರ ಬಾಯಲ್ಲಿ ನೀರೂರಿಸಿದರು. ತತ್ಸಂಬಂಧ ಹಾಗೂ ತದಸಂಬಂಧ ಅಧಿಕಾರಿಗಳೆಲ್ಲರೂ ತಾವೇ ಮಾದರಿಯಾಗಿ ಅಹಾರಸಾಮುಗ್ರಿ ಗಳನ್ನು ಬೆಳೆಸಿದರು. ಭಾರಿ ಭಾರಿ ಸಂಬಳ ತಿಂಬ ಅಧಿಕಾರಿಗಳ ಬಂಗಲೆಗಳ ಆವರಣದಲ್ಲೆಲ್ಲ ಒಂದು ಹೂವಿನ ಗಿಡ, ಅಲಂಕಾರದ ಸಸಿಯೇ ಇಲ್ಲವಾಯಿತು. ಎಲ್ಲೆಲ್ಲೂ ಕಾಯಿಪಲ್ಯಗಳು. ಹಿತ್ತಲಲ್ಲೂ ಮುತ್ತಲಲ್ಲೂ ಸುತ್ತಲಲ್ಲೂ ನಿಂತಕಡೆ ಮೆಂತ್ಯ, ಕೂತಕಡೆ ಕುಂಬಳ! ಉರುಳಿದರೆ ಹುರುಳಿ! ಬೇವಿನ ಮರಗಳ ಮೇಲೆಲ್ಲ ಹಾಗಲಕಾಯಿ. ಕುಂಡಗಳಲ್ಲಿ ಬೆಂಡೆ, ಕೊಸರಿಗೆ ಹಸುರು ಮೆಣಸು. ಗೋಡೆ ಅಂಚಿನಲ್ಲಿ ಗೋರಿ; ಸೂರಿನ ಮೇಲೆ ಸೋರೆ. ಬೀದಿ ಪಕ್ಕದಲ್ಲಿ ಬೂದು ಕುಂಬಳ. ಪಡುವಲಲ್ಲಿ ಪಡವಲ; ಮೂಡಲಲ್ಲಿ ಮೂಲಂಗಿ, ಬಡಗಲಲ್ಲಿ ಬಟಾಣಿ, ಸೌತಿನಲ್ಲಿ ಸೌತೆಕಾಯಿ. ಆಫೀಸ್ ರೂಂ ಟೇಬಲ್‌ಮೇಲೆ ಕಾಳಿ ಫ್ಲವರ್ ಅಲಂಕಾರ. ಊರಿನ ಪಾರ್ಕುಗಳಲ್ಲೂ ಹೀಗೆಯೇ. ಅಂಗೈಯಗಲ ದಷ್ಟು ಜಾಗವನ್ನೂ ಬಿಡದೆ, ಬರಗಾಲದ ಆಗಮನ ಖಾತ್ರಿಯಾದ ಕೂಡಲೇ, ಕಾಯಿಪಲ್ಯಗಳನ್ನು ಬೆಳಸಿದ್ದರಿಂದ ಬಡವರ ಹೊಟ್ಟೆ ತಣ್ಣಗಾಯಿತು. ಶಾಕಾದಿ ಗಳ ಬೆಲೆ ಬಹಳ ಇಳಿಯಿತು. ಆಡಳಿತದ ಸೂತ್ರಧಾರಿಗಳನ್ನು ಅನುಕರಿಸಿ, ಸಾರ್ವಜನಿಕರೂ ಕೂಡ, ಹೂ ಬೆಳೆಸುವ ಕಡೆ ಕಾಯಿ ಬೆಳಸಿ, ಧಾನ್ಯದ ಅಭಾವ ವನ್ನು ಪರಿಹರಿಸಿದರು. ಅಧಿಕಾರಿಗಳಲ್ಲಿ ಹಲವರು ಅಕ್ಕಿ ಸಕ್ಕರೆಗಳನ್ನು ನೆರೆ ಹೊರೆಯವರಿಗೆ ಗುಪ್ತವಾಗಿ ದಾನಮಾಡಿ ಅದರಿಂದ ಬಂದ ಪುಣ್ಯವನ್ನು ಪಡೆದರು. ಅನೇಕ ಅಧಿಕಾರಿಗಳು ಸೊರಗಿ ಬೆಂಡಾದರು; ಅರೆಬೆಂದ ಮುದ್ದೆಗಳನ್ನು ನುಂಗಿ ಅರಗಿಸಲಾರದೆ ಪೇಚಾಡಿದರು. ಜನರು ಅವರನ್ನು ಬಾಯಿ ತುಂಬ ಹೊಗಳಿದರು.

—o—

ಅಕ್ಷರಪ್ರಹಾರ

ಮೈಸೂರು ಅಕ್ಷರ ಪ್ರಚಾರಸಮಿತಿಯ ಸಂಚಾಲಕರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಿ, ಕನ್ನಡ ಅಕ್ಷರಮಾಲೆಯ ಪುನರ್ವಿಮರ್ಶೆ ನಡೆಯಿಸಿ, ಅದರ ಸಂಖ್ಯೆಯನ್ನಿಳಿಸಿ, ಕನ್ನಡಿಗರಿಗೆ ಉಪಕಾರಮಾಡಲು ನಿರ್ಧರಿಸಿರುವುದು ಸ್ತುತ್ಯ. "ಕನ್‌ನಡ ಬಾವುಟ" ದಲ್ಲಿ ಈ ಉದ್ಯಮವನ್ನು ಆಗಲೇ ಶ್ರೀಯುವರು ನಡೆಯಿಸಿರುವರಾದರೂ, ಅದು ಆಗ ಅಷ್ಟು ಪ್ರಚಾರಕ್ಕೆ ಬರಲಿಲ್ಲ. ಇದು ನಮ್ಮ ದುರದೃಷ್ಟ. ದೀರ್ಘಕ್ಕೆ ೯ ಎಂಬ ಚಿಹ್ನೆಯನ್ನು ಇಟ್ಟುಕೊಂಡು ಬಿಟ್ಟರೆ, ನಮಗೆ ಆ ಈ ಊ ಓ ಬೇಕಾಗುವುದಿಲ್ಲ. ಅ ೯ ಎಂಬುದೇ ಆ ಎಂಬುದಕ್ಕೆ ಬದಲಾಗಿ ಸಾಕು. ಅಲ್ಲದೆ, ಋಷಿ ಎಂದು ಬರಿಯುವವರೇ ಅಪರೂಪ. ರುಷಿ, ರುಚಿ, ರುಜಿನ ಇತ್ಯಾದಿಗಳನ್ನು ನೋಡಿ. ಋ ೠ, ಇವೆರಡೂ ಅನವಶ್ಯಕ. ಕೃಷ್ಣ ಎಂಬುದಕ್ಕೆ ನಾವು ಕ್‌ರುಷ್‌ಣ ಎಂದು ಸುಲಭವಾಗಿ ಬರೆದುಬಿಡಬಹುದು. ಹಾಗೆಯೇ, ಔ, ಎಂಬುದಕ್ಕೆ ಬದಲಾಗಿ ಸಾಮಾನ್ಯವಾಗಿ, ಅವು ಎಂದು ಹೇಳುವುದೇ ರೂಢಿ. ಚವುಳ, ಜವುಳಿ, ಅವುಳಿ, ಅವಳು, ಅವುಡಲ, ಅವುನ್‌ಸು—ಇತ್ಯಾದಿ. ಆದ್ದರಿಂದ, ಔ ಬೇಕಿಲ್ಲ. ಐ ಕೂಡ ಹಾಗೆಯೇ. ಅಯಿವರು, ಅಯಿಲು, ಎಂದು ಸುಲಭವಾಗಿ ಬಳಸಿಕೊಳ್ಳಬಹುದಾಗಿದೆ. ಸೊನ್ನೆಗೆ ಬದಲು ಮ್ ಎಂದಿಟ್ಟುಕೊಂಡು ಬಿಟ್ಟರೆ, ತೀರಿತು, ಪಮ್‌ಕಜ, ಅಹಮ್‌ಕಾರ, ನಮ್‌ಬರು … ಹೀಗೆ. ಅಂದರೆ, ಅ, ಇ, ಉ, ಎ, ಒ ಇಷ್ಟೇ ವ್ಯಂಜನಗಳು ನಮಗೆ ಸಾಕು.

ಇನ್ನು, ಮಹಾ ಪ್ರಾಣಗಳೆಲ್ಲ ಸಂಸ್ಕೃತಪದಗಳಿಗೆ ಬೇಕಾಗುತ್ತವೆಯೇ ಹೊರತು, ಅಚ್ಚು ಕನ್ನಡಿ ಪದಗಳಿಗೆ ಬೇಕಾಗುವುದೇ ಇಲ್ಲ. ಆದ್ದರಿಂದ, ನಮಗೆ, ಅವುಗಳ ತಂಟೆಯೇ ಬೇಡಿ. ಅಂಥ ಸಂಸ್ಕೃತ ಪದಗಳು ಯಾವುದಾದರೂ ಇನ್ನೂ ಅತ್ಯವಶ್ಯಕವಾಗಿ ಉಳಿದಿದ್ದರೆ, ತದ್ಭವ ಮಾಡಿಕೊಂಡು ಬಿಡೋಣ. ತಂಟೆ ತಪ್ಪಿತು. ಆದ್ದರಿಂದ, ಕ, ಗ, ಚ, ಜ, ಟ, ಡ, ಣ, ತ, ದ, ನ, ಪ, ಬ—ಇವೇ ಸಾಕು. ಅವುಗಳನ್ನೂ ಕೂಡ ನಾವು ಅನಾಯಾಸವಾಗಿ ಕಡಮೆ ಮಾಡಿಕೊಳ್ಳಬಹುದು. ಗ ಎಂಬುದು ಕ ಎಂಬುದರ ಮೃದು

ಸ್ವರೂಪ; ಜ ಚ ದ ಮೃದುಸ್ವರೂಪ. ಹಾಗೆಯೇ, ಟ ಡ ಗಳು, ತ ದ ಗಳು, ಪ ಬ ಗಳು. ಅಂದಮೇಲೆ, (ಕ) ಎಂದು ಬರೆದರೆ, ಗ ಎಂಬ ಸಂಕೇತವನ್ನು ನಾವು ಮಾಡಿಕೊಳ್ಳಬಹುದು. ತಮಿಳರು ಬರೀ ಕ ಎಂಬುದನ್ನೇ ಕ ಖ ಗ ಘ ಎಂಬ ನಾಲ್ಕಕ್ಕೂ ಉಪಯೋಗಿಸುತ್ತಿರುವಾಗ (ಕ) ಎಂಬುದನ್ನು ಗ ಎಂದು ಒಪ್ಪಿಕೊಳ್ಳುವುದರಲ್ಲಿ ತಪ್ಪೇನು? ಮೇಷ್ಟರುಗಳು ಮೂರು ತಿಂಗಳಲ್ಲಿ ಇದನ್ನು ಮಕ್ಕಳಿಗೆ ಮುಂದಟ್ಟುಮಾಡಿಸಬಲ್ಲರು. ಹಾಗಾದರೆ, ಕ, ಚ, ಟ, ತ, ಪ, ಮತ್ತು ( ) ಎಂಬ ಗುರುತು—ಇಷ್ಟೇ ಸಾಕಾಗುತ್ತವೆ. ಞ ಹಾಗೂ ಙ ಇವೆರಡೂ ಅನಿವಾರ್ಯವೇನೂ ಅಲ್ಲ. ಸರ್ವಜ್ಞ, ಜ್ಞಾನ ಎಂಬುದಕ್ಕೆ ನಾವು ಸರ್‌ವಗ್‌ನ, ಗ್‌ನೇನ ಎಂದು ಬರೆದು ಬಚಾವಾಗಬಹುದು. ಣ, ನ ಎರಡೂ ಬೇಕೆ ಎಂಬುದು ಮುಂದಿನ ಪ್ರಶ್ನೆ, ಏಕೆ ಬೇಕು? ನ ಕೆಳಗೆ ಚುಕ್ಕಿಹಾಕಿದರೆ, ಣ, ಲ ಕೆಳಗೆ ಚುಕ್ಕಿಹಾಕಿದರೆ, ಳ, ಶ ಕೆಳಗಡೆ ಚುಕ್ಕಿಹಾಕಿದರೆ ಸ, ಎಂದು ಕಲ್ಪಿಸಿಕೊಂಡು ನಾವು ಹಾಯಾಗಿರಬಹುದಲ್ಲಾ!. ಮ, ಯ, ರ, ವ—ಇದ್ದೇ ತೀರಬೇಕೆಂದು ತೋರುತ್ತದೆ.

ಷ....ಹ........ಆಯಿತು, ಅಕ್ಷರಮಾಲೆ. ಒತ್ತಕ್ಷರಗಳ ತಂಟೆಯೇಬೇಡ, ನಮಗೆ....ಒತ್‌ತಕ್‌ಷರ ಎಂದರಾಯಿತು?

ಅಂದರೆ, ಎಲ್ಲಿಗಿಳಿಯಿತು, ನೋಡಿ.

ಅ	ಇ	ಉ	ಎ	ಒ
ಕ	ಚ	ಟ	ತ	ನ
ಪ	ಮ	ಯ	ರ	ಲ
ವ	ಶ	ಷ	ಹ	( )

ಉದೇಹರಣ್ ಎಗ್‌ಎ: ಉ (ತ) ಯ ವೇ (ಕ) ಲ್ ಇ ಚ್ ಎಲ್ ಉ ವ ಕ ನ್ ನ (ಟ) ನ ೕ (ಟ್) ಉ........ ..

(ಶ್) ಇ ರ್ ಇ (ಕ) ನ್ ನ (ಟ) ಮ್ (ಕ್) ಎಲ್ (ಕ್) ಎ

—ಈಶ್ವರಪ್ಪ.

—o—

ತೊಳೆಶಿಂಗಂ

ಲಾರಿಡ್ರೈವರ್ ತೊಳೆಶಿಂಗಂ ತುಂಬಾ ಉದಾರಿ ; ಸಂಜೆಯಾದಮೇಲಂತೂ ಅವನು ದಾರಿಯಲ್ಲಿ ಹೋಗುವ ಯಾರಿಗೂ ಸೀಟಿಲ್ಲ ಅಂತ ಕೈ ತೋರಿಸುವುದೇ ಇಲ್ಲ. ಅಡ್ಡಕೈ ಹಿಡಿದವರನ್ನೆಲ್ಲ ಹಿಂದೆ ಹತ್ತಿಸಿ, ಮೂಟೆಗಳ ಮೇಲೆ ಕೂರಿಸುತ್ತಾನೆ. ತನ್ನ ಸೀಟಲ್ಲಂತೂ ಐದಾರು ದಾರಿಗರಿಗಿಂತ ಕಡಮೆ ಯಾವತ್ತೂ ಇಲ್ಲ. ಆದರೆ, ಅವನ ಲಾರಿಯಲ್ಲಿ ಪ್ರಯಾಣ ಮಾಡುವುದೆಂದರೆ, ನರಕ ಯಾತನೆ, ಪುನರ್ಜನ್ಮ. ಒಂದುಸಲ ನಾನು ಅವನ ಎಡಪಕ್ಕದಲ್ಲಿದ್ದಕ್ಕೆ. "ಶಿಂಗಂ! ನಿಧಾನವಾಗಿ ಬಿಡು" ಎಂದೆ, ಧೈರ್ಯ ತಾಳಿ. ಅದಕ್ಕವನು "ಯಾಕೆ ಸ್ವಾಮಿ, ಪುಕ್ಕಲು ! ಊಟಿಯಿಂದ ಕೊಯಮತ್ತೂರಿಗೆ ನೀಲಗಿರಿ ಇಳಿದು ಹೋಗುವಾಗ ಈ ಚಕ್ರದಿಂದ ಎರಡು ಕೈಗಳನ್ನೂ ತೆಗೆದು, ಎಂಟು ವೀಳ್ಯದೆಲೆ ಸುಣ್ಣ ಹಚ್ಚಿ ಮಡಿಸಿ ಬಾಯಿಗೆ ಹಾಕಿಕೊಳ್ಳುವೆ 'ನಾನು, ಗೊತ್ತೆ ?. .ನನಗೇನೂ ಭಯವಿಲ್ಲ ! ಬ್ರೇಕ್ ಕೊಂಚ ಐಬಾದರೇನಂತೆ ! ದಾರಿಪಕ್ಕದಲ್ಲಿ ಮರಗಳಿಲ್ಲವೆ, ಲಾರೀನ ತಡೆದು ನಿಲ್ಲಿಸೋಕೆ ?" ಅಂದ, ದೂರದ ಮರವೊಂದನ್ನು ತೋರಿಸಿದ. ಅದರ ಮೇಲಕ್ಕೆ ಯಾವನೋ ಕುರುಬ ಹತ್ತಿ ಹೋಗುತ್ತಿದ್ದ. ಸೊಪ್ಪು ಕೊಯ್ದು ಕುರಿಗೆ ಹಾಕುವುದಕ್ಕೆ ಅಂತ ಇದ್ದೆ, ನಾನು. ಆದರೆ, ತೊಳೆಶಿಂಗಂ ಹೇಳಿದ, "ನೋಡಿ ! ನಾನು ಡ್ರೈವ್ ಮಾಡೋನು ಅಂತ ದೂರದಿಂದಲೇ ಪತ್ತೆಹಚ್ಚಿ, ಅವನು ಹೇಗೆ ಮರ ಹತ್ತುತ್ತಾ ಇದಾನೆ, ನೋಡಿ, ಪ್ರಾಣ ಉಳಿಸಿಕೊಳ್ಳೋಕೆ !" ಅಂದ. "ಒಂದೇಸಲ, ಸ್ವಾಮಿ, ನಾನು ಭಾರಿ ಅನಾಹುತ ಮಾಡಿಸಿರೋದು; ಏನಾಯಿತು, ಅಂದರೆ, ನಾನೂ, ರಾಮಸೇತು, ನಾವಿಬ್ಬರೂ ಅವತ್ತು ಒಂದೇ ಪ್ರಯಾಣಿಕನನ್ನ ಅಟ್ಟಿಸಿಕೊಂಡು ನಾ ಮುಂದು ತಾ ಮುಂದು ಅಂತ ನುಗ್ಗಿದ್ದೆವು. ಕಳ್ಳ, ಅವನು ಕೊನೆಗೂ ರಾಮಸೇತು ಲಾರಿಗೆ ಸಿಕ್ಕಿ ಹೊರಟುಹೋದ !" ಎಂದು ಬಹಳ ಉತ್ಸಾಹದಿಂದ ವಿವರಿಸಿದ. "ಈಗ ನಿಮಗೊಂದು ನಿದರ್ಶನ ಕೊಡಲೆ ? ನಾನೆಂಥ ಡ್ರೈವರು, ಅಂತ ನೋಡಿ ! ಅಕೊ ! ಆ ಇಲೆಕ್ಟ್ರಿಕ್ ಕಂಬ ನಮ್ಮ ಲಾರಿ ಕಡೆಗೇನೆ ನೆಟ್ಟಗೆ ಓಡಿಬರುತ್ತಿದೆಯಲ್ಲಾ,.... ಇಕೊ ! ಅದಕ್ಕೆ ದಾರಿ ಬಿಟ್ಟುಬಿಟ್ಟೆ, ನೋಡಿ" ಎಂದು ಮಹರಾಯ, ನಿಮಿಷಾರ್ಧದಲ್ಲಿ ವಾಹನವನ್ನು ಬಲಕ್ಕೆ ತಿರುಗಿಸಿದ. ಮೂಟೆಗಳ ಮೇಲೆ ಕೂತಿದ್ದ ನಾಲ್ಕು ಜನ ಕೆಳಗೆ ಬಿದ್ದರು. ಅವರನ್ನೆತ್ತಿ ಮಲಗಿಸಲು ಮೂರು ಗಂಟೆಗಳಕಾಲ ಖರ್ಚಾಯಿತು. ಸಂಜೆಹೊತ್ತಿಗೆ ಯಾವುದೋ ಒಂದು ಊರಾಚೆ, ತೊಳಶಿಂಗಂ ಇಳಿದುಹೋಗಿ, ತುಂಬಿ ಬಂದ. ಲಾರಿ ಇದ್ದಕ್ಕಿದ್ದಹಾಗೆ ತೂಗಾಡುತ್ತ ವಾಲುತ್ತ ಚರಂಡಿಯಕಡೆ ಹೊರಲಿತು.

" ತೊಳಸಿಂಗಂ! ಯಾಕಪ್ಪ ಅತ್ತಲಾಗೆ?" ಎಂದೆ. ಅವನು ಕಣ್ಣರಳಿಸಿ, "ಆ!.... ಓ! ನಾನು.... ನೀವೇ ಡ್ರೈವ್ ಮಾಡುತ್ತಿದೀರಿ, ಅಂತಿದ್ದೆ. ನನ್ನ ಕೈಯಲ್ಲೇ ಇದೆಯೇ ವೀಲು ?" ಎಂದ. " ಇದು ಚೆನ್ನಾಗಿಲ್ಲ, ನೋಡು ! ಜ್ಞಾನ ನೆಟ್ಟಗಿಲ್ಲ, ಅಂದರೆ, ವೀಲ್ ಹಿಡಿಯಬಾರದು " ಎಂದೆ, " ಮುಚ್ಚಿರಿ ಕಂಡಿದೇನೆ! ಜ್ಞಾನ ನೆಟ್ಟಗಿಲ್ಲದೆ ಇರೋದು ನನಗೋ ನಿಮಗೋ....ನನ್ನ ಜ್ಞಾನ ನೆಟ್ಟಗಿದೆ, ಅಂತ ತೋರಿಸಲೋ ! ಈಗ....ಅಗೊ! ಅಲ್ಲಿ, ಎರಡು ಲೈಟ್ ಕಾಣುತ್ತಾ ಇದೆಯಲ್ಲಾ, ಹತ್ರ ಹತ್ರ, ಆಕಡೆ ಈಕಡೆ....ಅದರ ನಡುವೆ, ಸರಿಯ್ಹಾಗಿ, ಈ ಲಾರೀನ ಡ್ರೈವ್ ಮಾಡಲೇನು ?" ಅಂದ. ನಾನು ಭಯದಿಂದ ಕಿರಿಚಿಕೊಂಡೆ. ಅವು ನಮ್ಮ ಎದುರು ಬರುತ್ತಿದ್ದ ಯಾವುದೋ ಕಾರಿನ ಲೈಟ್‌ಗಳು ! " ಬೇಡ ಮಾರಾಯ ! ನಿನ್ನ ಜ್ಞಾನ ಫಸ್ಟ್ ಕ್ಲಾಸಾಗಿದೆ....ಎರಡು ಲೈಟ್ ಮಧ್ಯ ಬಿಡಬೇಡ....ಪಕ್ಕದಲ್ಲೇ ಹೋಗು, ಸಾಕು" ಅಂದೆ. ಮತ್ತೆ ಅವನನ್ನ ಮಾತನಾಡಿಸಲೇ ಇಲ್ಲ....

——o——

ಮೈಸೂರು,
೧-೧೦-೧೯೪೬

ಕೊರ್ವಂಜಿ ಸಂಪಾದಕ್ರೇ, ನಮಸ್ಕಾರ,

ಜ್ಞಾಪ್ಕ ಇದೆಯೇ 'ಗೋಸಾವಿ' ಹೆಸ್ರು? ನೀವ್ನನ್ಮರೆತ್ರೂ ನಾನ್ನಿಮ್ಮನ್ಮರೆಯೊಲ್ಲ. ಅಂದ್ಮಾತ್ರಕ್ಕೇ ಇದೆಲ್ಲಿಯ ಶನೀಂತನ್ಕೋಬೇಡಿ. ನಿಮ್ಮನ್ನೇನೂ ಗೋಳು ಹುಯ್ಕೋದಿಲ್ಲ. ಆದ್ರೂ ಸ್ವಲ್ಪ ತೊಂದ್ರೆ ಕೊಡ್ತೇನೆ, ಕ್ಷಮ್ಸಿ.

ನಾನು ೩-೪ ಕಥೆ ಕಳ್ಸಿ ಚಾತಕಪಕ್ಷೀಹಾಗೆ ನಿರೀಕ್ಷಿಸಿದ್ದೆ, ಒಂದಾರೂ ಪ್ರಕಟವಾಗ್ಬಹ್ದೂಂತ. ಆದ್ರೆ ಪ್ರಕಟವಾಗೋದ್ಹಾಗಿರ್ಲಿ—ಒಂದ್ಸಲ ಉತ್ರ ಬರೀಲೀಂತ ಒಂದೂವರಾಣೆ ಸ್ಟಾಂಪು ಕಳ್ಸಿದ್ದಕ್ಕೆ-ಒಂಬತ್ಕಾಸಿನುತ್ರವೂ ಬರ್ಲಿಲ್ಲ. ಕಾರಣ್ವೇನೋ ತಿಳೀಲಿಲ್ಲ.

ದಯವಿಟ್ಟು 'ಇನ್ನೊಂದ್ಸಲ ನನ್ಕಥೆಗಳ್ನೋದಿ, ತಪ್ಪಿದ್ರೆ ತಿದ್ದಿ, ಅವುಗಳಲ್ಲಿ ಶ್ರೇಷ್ಟವಾದ್ದನ್ಪ್ರಕಟಿಸೀಂತ ಕೇಳ್ಕೋತೇನೆ. ಉತ್ರ 'ಆಗಲೀ" ನೋ, "ಆಗುವುದಿಲ್ಲ" ನೋ ತಿಳ್ಸಿ,

ಇತಿ ನಿಮ್ಮಲ್ನೋವು,

" ಗೋಸಾವಿ "

ಇದೇ ದಿವಾಳಿಯಾಟ

—— ೦ ——

(ಶಿ ಶು ಗೀ ತೆ)

ಸುರುಸುರುಬತ್ತಿ - ಹೊತ್ತಿಸಿ ಕೊಟ್ಟ
ಅಕ್ಕನ ಕೈಯಲಿ - ನಂ ಭಾವ !
ಅಕ್ಕನು ಪುಕ್ಕಲು ! - ಬಿಟ್ಟಳು ಭಾವನ
ಹೊಸ ಹೊಸಪಂಚೆಯ . ತೊಡೆ ಮೇಲೆ !
‘ ಚುರುಕ್ ’ ಅಂದಿತಾವೇಳೆ !

ಮತಾಪು ಕಡ್ಡಿ - ಟಕ್ಕನೆ ಗೀಚಿ
ಕೊಟ್ಟನು ಅಕ್ಕನ - ಕೈಯಲ್ಲಿ !
“ ಧೈರ್ಯದಿ ಹಿಡಿಯೆ ” - ಎನ್ನುತಲಿ.
ಕಣ್ಣನುಮುಚ್ಚಿ - ತುಟಿಗಳ ಬಿಚ್ಚಿ
ಅಕ್ಕನು ಹಿಡಿದಳು - ಮತಾಪು ಕಡ್ಡಿಯ
ಭಾವನಮೀಸೆಯ - ಬಲ ಬುಡಕೆ !
ಆಯಿತು ಕರಿಪೂರಕೆ !

ಮುರುಟಲು ಭಾವನ - ಮೀಸೆಯ ಅಂಚು
ಹಾಕಿದ ಭಾವನು - ಒಳಹೊಂಚು.
ಕೊಟ್ಟನು ಅಕ್ಕಗೆ - ಪುಟಾಣಿ ಗಿಚ್ಚಿ !
ಕೂಗದೆ ಕಿರಿಚದೆ - ಕಣ್ ಕಣ್ ಬಿಟ್ಟಳು
ನನ್ ಕಡೆ ನೋಡುತ - ನಮ್ಮಕ್ಕ........
ನಮ್ಮತ್ತಕ್ಕ !

ಅಕ್ಕನ ಸೈಗೆಯು - ಗೊತ್ತಾಯ್ತು ಕೂಡಲೆ,
ಹಾಕಿದೆ ಭಾವನ - ಷರಟಿನ ಮೇಗಡೆ

ಚಟಪಟ ಚಿನ್‌ಕುರುಳಿ....ಅವ ಕುಣಿದಾಡಿದ
ಕೋಪದಿ ಕೆರಳಿ ..." ಪಟಿಂಗ ! ಪೋಕರಿ !"
ಹೊಡೆಯಲು ಬಂದನು—ನಂ ಭಾವ !

ಗೋಡೆಯ ಮಗ್ಗುಲೆ - ಓಡಿದೆ ಓಡಿದೆ
ಬಂದೇ ಬಂದೆ - ಅಡಿಗೆಯ ಮನೆಗೆ
ಹಿಡಿದೇಹಿಡಿದೆನು - ಅಮ್ಮನ ಬೆನ್ನ !
'ಮಡೀ, ಮಡೀ' - ನೂಕಿದಳೆನ್ನ !
ಹೆದರಿದ ನನ್ನ !

ಒಗ್ಗರಣೆಕಾಸಿದ - ಸೌಟನು ಕಾಲಿನ
ಹತ್ತಿರ ತಂದಳು - ನಮ್ಮಜ್ಜಿ !
ಗುರುಗುರುಗುಟ್ಟುತ - ಬೆನ್ನನು ಸವರುತ
ಭಾವನು ಬಂದನು - " ಏನಿದು, ಹುಡುಗಾಟ ? "
ಎನ್ನುತ ಬೀರಿದ - ನುಂಗುವ ನೋಟ.
ಕಿತ್ತೆನು ಓಟ

ಅಜ್ಜಿಯು ಭಾವನ - ಕಡೆ ತಿರುಗಿ
ಮೆಲ್ಲನೆ ಅಂದಳು : 'ದಿವಾಳಿ ಆಟ.'
ನೋಡುತ ಮರೆಯಲಿ - ಅಕ್ಕನು ಫಕ್ಕನೆ
ನಕ್ಕಳು ಗೊಳ್ಳೆಂದು.

—ಬಿ. ಸ್ವಾ.

ಬೋ ೕ ರ್

—— ೦ ——

೧

ರೆಯಿಲಿಗೆ ಹೋಗಿ, ಬಸ್ಸಲಿ ಕೂಡಿ,
ಡ್ರಾಯಿಂಗ್ ರೂಮಲ್ಲೂ, ಲಾಲ್‌ಬಾಗಲ್ಲೂ,
ಹಬ್ಬದ ದಿವಸವೂ ಕ್ಲಬ್ಬಿನ ಸೋಫದಿ
ಹಲ್‌ಹಲ್‌ಕಿರಿಯುತ, ಹಿಡಿದು ಕೂರಿಸುತ
ಕಥೆಗಳ ಹೇಳುವ, ನವೆಯಿಂ, ನರಳುವ,
ಸುಮ್ಮನೆ ಕೂರಲು ಸಾಧ್ಯವೆ ಇಲ್ಲದ
ಖಾಲೀ ಬುರುಡೆಯ ಭಾರೀ ಬೋರು........
ಬಂದೇ ಬರುವನು ! ಕುಂತೇ ಇರುವನು........

೨

ನಿಮಿಷ ಹತ್ತರಲಿ ಸಾವಿರ ಕಥೆಗಳು....
ಲಂಚ ಹಾದರದ ಜೂಜಿನ ಫೌಜಿನ
ಚೆಂಗ್ ಕೈ ಷೇಕರ ಗೋವೆಯ, ಸ್ಟಾಲಿನ.
ಮೈಲಾಪುರದ, ದಿಳ್ಳೀ ಪಳ್ಳಿಯ,
ಐಲಾಪುರದ, ಚಿಳ್ಳೀಪಿಳ್ಳೆಯ
ಜಿನ್ನನ ವೇವಲ ಒಳ ಒಳ ಒಳಗಿನ
ತಮಾಷೆ ತುಂಬಿದ ಧಳ ಧಳ ಥಳಕಿನ
ಕಥೆಗಳ ಪರಿಮಳೆ! ಪಕ್ಕೆಯನೋವು !
(ಆದರೆ. ನಾನು....
ಮುಯ್ಯಿಗೆ ಮುಯ್ಯಿ,
ಕೊರೆತಕೆ ಕೊರೆತದ
ಸಾಲವ ತೀರ್ಸುವುದ್ಯಾವಾಗ ?)
ನಾನೊಂದಾದರು ಹೇಳಲೇ ಬೇಕು !
ಕಥೆಯೊ, ಒಂದೂ, ನೆನಪಿಗೆ ಬಾರದು !

ಶೀತರೆ, ನಾವು, " ಯಾನ್ "ಗಳ ತೆರೆದರೆ,
ಅವನಿಗೆ ಅದರಿಂ ತಡೆಯೇ ಇಲ್ಲವು.
ಖಾರದ ಕಥೆಗಳು, ಜಾರರ ಕಥೆಗಳು,
ಡೀ. ಸಿ, ಡೀ. ಎಂ., ಜೀ. ಎಂ., ಸರ್.ಗಳು
ಆಡಿದ ಮಾಡಿದ ಗುಡಿ ಗುಡಿ ಗುಟ್‌ಗಳು !
ಯಾರೂ ಕಾಣದೆ ಜಾರಿದ ಭಾರೀ
ಬಿಗ್ ಬಿಗ್ ಬಾಸ್‌ಗಳ ತರಹೇವಾರೀ
ತಮಾಷೆ ಕಿಡಿಗಳ ಸಿಡಿಸುವನವನು........

(ಆದರೆ, ನಾನು,
ಮುಯ್ಯಿಗೆ ಮುಯ್ಯಿ
ಕೊರೆತಕೆ ಕೊರೆತದ
ಸಾಲವ ತೀರ್ಸುವುದ್ಯಾವಾಗ ?)

ನಾನೊಂದಾದರೂ ಹೇಳಲೇ ಬೇಕು !
ಕಥೆಯೊ, ಒಂದೂ, ನೆನಪಿಗೆ ಬಾರದು !

೪

ಆತನ ಕಥೆಗಳು ಕಿವಿಯಿಂ ಕಿವಿಗೆ
ಟ್ರೊತಿನ ಸೀಮೆಯ ದಾಟಿದೆ ತುಸ ತುಸ
ಕೇಳಲು... ಹಿ..ಹಿ..ಹಿ..ಹಿ....ಬಹು ಸ್ವಾರಸ್ಯ !
ಹಿರಿತನದವರಾ ಕಿರಿತನ ಕುರಿತನ
ಮುದಿ ಮೆದುಳೊಳಗಣ ಮಿದುತನ ಕದಿತನ
ಹಿ..ಹಿ..ಹಿ..ಹಿ....ಅವನಾ ಕಥೆಗಳ ತುಂಬ
ಜಿ. ಒ ; ಆರ್ಡರು ; ಲಾ,ಗಳ ಲಾಗವೆ !
ಸಾಹೇಬರುಗಳ ಡೋಲೆ ! ಸೋಲೆ !

(ಆದರೆ, ನಾನು
ಮುಯ್ಯಿಗೆ ಮುಯ್ಯಿ
ಕೊರೆತಕೆ ಕೊರೆತದ
ಸಾಲವ ತೀರ್ಸುವುದ್ಯಾವಾಗ ?)

ನಾನೊಂದಾದರೂ ಹೇಳಲೇ ಬೇಕು.
ಕಥೆಯೊ, ಒಂದೂ, ನೆನಪಿಗೆ ಬಾರದು.

(A. P H.ನ್ನನುಸರಿಸಿ)

‘ ಕ್ವಿಟ್ ಕಿರಲೂರ್ ’ ಚಳುವಳಿ

ಕಿರಲೂರು ಸಂಸ್ಥಾನದ ಮಹಾ ಮಂತ್ರಿ ನಿವೃತ್ತರಾಗುವರೆಂಬ ಸುದ್ದಿ ಹೊರಟೊಡನೆಯೇ ಮುಂದಿನ ಮಹಾಮಂತ್ರಿ ಯಾರೆಂಬುದರ ಬಗ್ಗೆ ಊಹಾ ಪೋಹಗಳು ಹರಡಲಾರಂಭಿಸಿದುವು. ಒಂದು ಪಂಗಡದವರು, ನಾವು ಹಿಂದು ಳಿದವರು, ನಮ್ಮ ಪ್ರತಿನಿಧಿಗೇ ಸಲ್ಲತಕ್ಕುದೆಂದರು, ಮತ್ತೊಂದು ಪಂಗಡ ದವರು, “ನಾವು ಹಿಂದುಳಿದವರ ಹಿಂದಿರುವವರು, ನಮಗೇ ಈಸಾರಿ” ಎಂದರು. ಅಲ್ಪಸ್ವಲ್ಪ ಉಸಿರುಳಿದಿರುವ ಮುಂದುಳಿದವರೂ ಸಹ ಇರುವ ಉಸಿರಿನ ಸಹಾಯ ದಿಂದಲೇ “ ಉನ್ನತಾಧಿಕಾರಿಯಾದ ...ರಾಯರಿಗೇ ಕೊಡಬೇಕಾದ್ದು ಧರ್ಮ ” ವೆಂದರು !

ಮಂತ್ರಿ ಪದವಿಯ ಪ್ರತೀಕ್ಷೆಯುಳ್ಳ ಉದ್ಯೋಗಿಗಳು ಪ್ರತಿಯೊಬ್ಬರೂ ತಮಗೇ ಖಂಡಿತವೆಂದು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿದರು. ದೊಡ್ಡ ಸರಿಗೆಪೇಟ ಕೊಂಡರು, ಬ್ಯೂಕ್ ಕಾರ್‌ಗೆ ಆರ್ಡರ್ ಕೊಟ್ಟರು ನೀಯೋ ವಿಲ್ಲ, ವಸಂತವಿಹಾರ, ಕ್ಷಮಾಲಯಗಳಿಗೆ ಅಡ್ವಾನ್ಸ್ ಸುರಿದರು, . !

ಅಷ್ಟರಲ್ಲಿ, ಅಲ್ಲಂಪುರದ ಅನಂತರಾಜ, ಮಂತ್ರಿ ದುರಂಧರ ರವರು ಶೀಘ್ರ ದಲ್ಲೇ ಕಿರಲೂರಿನ ಮಹಾ ಮಂತ್ರಿಯಾಗಿ ನೇಮಕವಾಗುವರೆಂಬ ಸುದ್ದಿ ಪ್ರಧಾನ ಕಛೇರಿಯ ರಂಧ್ರವೊಂದರಿಂದ ಸೋರಿತು !

ಈ ಹೃದಯಭೇದಕವಾದ ವರ್ತಮಾನವನ್ನು ಕೇಳಿ ಸಂಸ್ಥಾನಕ್ಕೆ ಸಂಸ್ಥಾ ನವೇ ಹಾ ಹಾಕಾರ ಮಾಡಿತು ! ಹಿಂದುಳಿದವರೂ, ಮುಂದುಳಿದವರೂ, ತುಳಿ ದವರೂ, ತುಳಿಸಿಕೊಂಡವರೂ, ಎಲ್ಲಾ ಗೋಳಿಟ್ಟರು. ಕಾರ್‌ಗೆ ಆರ್ಡರ್ ಕೊಟ್ಟವರು ಕಂಗಾಲಾದರು. ವಿಲ್ಲಾಗಳಿಗೆ ಅಡ್ವಾನ್ಸ್ ಸುರಿದವರು ಮೂರ್ಛೆ ಹೋದರು !

ಮೂರನೇ ದಿನದಿಂದ ಆರಂಭವಾಯಿತು ಪ್ರತಿಭಟನಾ ಚಳುವಳಿ ! ದೇಶದ ಮೂಲೆ ಮೂಲೆಗಳಲ್ಲೂ ಸಭೆಗಳು ನಡೆದುವು. ಸಭೆಗಳಲ್ಲಿ ತೀಕ್ಷ್ಣ ಭಾಷಣ ಗಳನ್ನು ಮಾಡಿದ್ದಲ್ಲದೆ, ಪ್ರತ್ಯೇಕ ಪ್ರತ್ಯೇಕವಾಗಿ ಪ್ರತಿಯೊಬ್ಬ ಮಹನೀಯರೂ ದಿನಪತ್ರಿಕೆಗಳಲ್ಲೂ, ವಾರಪತ್ರಿಕೆಗಳಲ್ಲೂ, ಮಾಸಪತ್ರಿಕೆಗಳಲ್ಲೂ, ವಾರ್ಷಿಕ ಸಂಚಿಕೆಗಳಲ್ಲೂ, ನಾಲ್ಕು ನಾಲ್ಕು ಕಾಲಮ್ಮು ಕಾರಿದರು ! “ ನಮ್ಮ ದೇಶದಲ್ಲಿ ಮಹಾ ಮಂತ್ರಿಸ್ಥಾನಕ್ಕೆ ಯೋಗ್ಯರಾದವರು ಯಾರೂ ಗತಿಯಿರಲಿಲ್ಲವೆ ? ಪರ ದೇಶದಿಂದ ಆಮದು ಮಾಡುವುದು ಯಾವನ್ಯಾಯ ? ಏನು ಧರ್ಮ !........”

ಎಂದರಚಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗುವುದಿಲ್ಲ ವೆಂದು ಮುಷ್ಕರ ಹೂಡಿದರು, 'ಕ್ವಿಟ್ ಕಿರಲೂರ್' ಎಂದು ಕಿರಲಿದರು, ಒರಲಿ ದರು ! ಅನೇಕ ಪತ್ರಿಕೆಗಳು ಪ್ರತಿಭಟಿಸಿ ಅಗ್ರಲೇಖನಗಳನ್ನು ಬರೆದು ಸಾಕಾಗಿ, ಕೊನೆಗೆ ಈ ನೇಮಕ ತಪ್ಪುವವರೆಗೂ ಅಗ್ರಲೇಖನವನ್ನೇ ಬರೆಯುವುದಿಲ್ಲವೆಂದು ಬೆದರಿಸಿದರು.

ಸುಮಾರು ಒಂದು ತಿಂಗಳನಂತರ ಅನಂತರಾಜರವರ ನೇಮಕದಬಗ್ಗೆ ಸರ್ಕಾರೀ ಪ್ರಕಟಣೆ ಹೊರಬಿತ್ತು ; ಮತ್ತು ಅವರ ಆಗಮನದ ದಿನ ಸಹ ತಿಳಿಸಲಾಗಿತ್ತು.

ನನಗೆ ಆದಿನ ರೈಲ್ವೇಸ್ಟೇಷನ್ನಿನಲ್ಲೇ ಏನು ಅನಾಹುತವಾಗುತ್ತೋ ನೋಡಬೇಕೆನ್ನಿಸಿತು. ಸ್ಟೇಷನ್ನಿಗೆ ಹೋದೆ. ಜನಸಂದಣಿ ಕಿಕ್ಕಿರಿದು ಹೋಗಿತ್ತು ! ನನಗೆ ನಿಜವಾಗಿಯೂ ದಿಗಿಲಾಯಿತು ! ಆ ಪ್ರಾಣಿಯಮೇಲೆ ಇಷ್ಟು ಜಿದ್ದೇ ! ಆತ ರೈಲಿಂದ ಇಳಿದಕೂಡಲೇ ಹತವಾಗುವುದೇನೋ ನಿಜ, ಆದರೆ ಒಬ್ಬನನ್ನು ಮುಗಿಸುವುದಕ್ಕೆ ಇಷ್ಟುಜನ ಬೇಕೇ ! ಅಯ್ಯೋ ಪಾಪ, ಎನ್ನಿಸಿತು.

ರೈಲು ಬಂತು, ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಿಂದ ಮಂತ್ರಿ ದುರಂಧ ರರು ಇಳಿದರು. ನುಗ್ಗಿತು ಜನರ ಗುಂಪು ! ನಾನು ಹೆದರಿ ಕಣ್ಣುಮುಚ್ಚಿ ಐದು ನಿಮಿಷದ ನಂತರ, ಬಿಟ್ಟೆ........ !

ಮಂತ್ರಿವರ್ಯರು ತಲೆಯತನಕ ಹಾರಗಳಿಂದ ಮುಚ್ಚಿ ಹೋಗಿದಾರೆ ! ಪ್ರತಿಭಟನಾ ಸಭೆಗಳ ನೇತಾಜಿ ತಗಲೂಫಯ್ಯನವರ ಕೈಯಲ್ಲಿ ಜೋಡಿಹಾರ ! ಕೆಂಡಕಾರಿ ಕವಿತ್ವಬರೆದ ಕಪಿನೀಪತಿರಾಯರ ಕೈಲಿ ಸರಿಗೆಹಾರ, ವೀರಾವೇಶದ ಭಾಷಣಗಳನ್ನೇ ಮಾಡಿದ ವೀರಯ್ಯನವರ ಹಸ್ತದಲ್ಲಿ ಪನ್ನೀರು, ಗಂಧ, ಅಗ್ರ ಲೇಖನವನ್ನು ಆಹುತಿಕೊಟ್ಟ ನಾಗಪ್ಪನವರ ಕೈಯಲ್ಲಿ ಕ್ಯಾಮರಾ, ಕಿವಿಯಿಂದ ಕಿವಿವರೆಗೂ ನಗೆ !

ಅಂದಿನಿಂದ ಹೆಚ್ಚುಕಡಿಮೆ ಹದಿನೈದುದಿನ ಕಿರಲೂರಿನ ಜನರಿಗೆ ಪುರುಸತ್ತೇ ಇಲ್ಲ- ದಿನಾ ಅಭಿನಂದನಾ ಸಭೆಗಳು, ಅಡ್ರೆಸ್ಸುಗಳ ಅಷ್ಟೋತ್ತರ, ಕ್ಯಾಸ್ಕೆಟ್ಟು ಗಳ ಪೈಪೋಟಿ ! ಪ್ರತಿಭಟನಾ ಸಭೆಗಳ ಮುಂದಾಳುಗಳಾದ ತಗಲೂಫಯ್ಯ.... ಇತ್ಯಾದಿಗಳೇ ಈ ಸಮಾರಂಭಗಳಿಗೂ ಮುಂದಾಳುಗಳು- ಅನಂತರಾಜರ ಆಡಳಿತ ಅನಂತಾನಂದವನ್ನು ನೀಡುವುದು ಎಂದು ಹೊಗಳಿದರು; ಕವಿತೆಗಳನ್ನು ಕಟ್ಟಿದರು, ಕಾಲಿಗೆ ಮುಗಿದರು- ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ ಕರೆದು ಕೈ ಜೋಡಿಸಿದರು, ಪತ್ರಿಕಾ ಪ್ರತಿನಿಧಿಗಳು ಅವರ ಬಾಗಿಲು ಕಾದರು.

ಕಿರಲೂರಿನ ಸತ್ಪ್ರಜೆಗಳು ಈರೀತಿ ಮೊದಲು ಕಪ್ಪು ಬಾವುಟವನ್ನು ತೋರಿಸಿ ಆಮೇಲೆ ಇಂಥಾ ಸುಖಾಗಮನವನ್ನು ಬಯಸಿದ್ದನ್ನು ನೋಡಿ ನನಗೆ ಬೆಪ್ಪಾಯಿತು.

ಮೂರನೇವರ್ಷದ ಪ್ರೊಬೇಷನರುಗಳ ನೇಮಕದ ಪಟ್ಟಿ ಇನ್ನೂ ಹೊರ ಬಿದ್ದಿಲ್ಲವೆಂದು ತಿಳಿದಾಗ, ಕಣ್ಣುಬಿಟ್ಟೆ! ತಗಲೂಫಯ್ಯನವರ ಮಗ ಅಸಿಸ್ಟೆಂಟ್ ಕಮಿಷನರಿಯ, ಕಪಿನೀಪತಿರಾಯರ ಅಳಿಯ ರೆವಿನ್ಯೂ ಪ್ರೊಬೇಷನರಿಯ, ವೀರಯ್ಯನವರ ಸಂತಾನ ಮತ್ತೊಂದು ಪ್ರೊಬೇಷನರಿಯ, ನಾಗಪ್ಪನ ಮಗ ಮಗದೊಂದರ, ವಿದ್ಯಾರ್ಥಿಗಳು ನೂರಾರು ಚಾಕರಿಗಳ, ಕನಸು ಕಾಣು ತ್ತಿರುವರಂತೆ.

—ಟಿ. ಸುನಂದಮ್ಮ.

———o———



ಚಿಲ್ಲರೆ ಇಲ್ಲದೇ ಇದ್ದರೆ ಕೆಡ್ತು, ಜೇಬಿನಲ್ಲಿರೊ ಪಟಾಕಿ ಪೊಟ್ಟಣ ಕೊಡಿ, ಪೇಪರ್ ಕೊಡ್ತೇನೆ.

ಬಾಡಿಗೆ

—— o ——

ನಮ್ಮೂರಿನಲ್ಲಿ ಮನೆ ಬಾಡಿಗೆಗೆ ಹುಡುಕುವುದು, ಗಿಟ್ಟಿಸುವುದು ಇವೆಲ್ಲಾ ದಿನಚರಿ ಆಗಿಬಿಟ್ಟಿದೆ. ಗಾಡಿ ಬಾಡಿಗ್ಗೆ ಗೊತ್ತುಮಾಡುವುದೂ ಅದೇ ರೀತಿ ಅನುಭವಕ್ಕೆ ಬಂದಿದೆ. ಸೈಕಲ್ ಬಾಡಿಗೆ ಸಕಲರಿಗೂ ತಿಳಿದಿದ್ದೇ—ಬಟ್ಟೆ ಬಾಡಿಗೆಗೆ ತೆಗೆದುಕೊಳ್ಳುವುದೂ ಉಂಟು— ಕಾನ್‌ವೊಕೇಷ‌ ಹೊತ್ತಿನಲ್ಲಿ, ಅನ್ನಿ.

ಆದರೆ ಮನುಷ್ಯನ್ನ ಬಾಡಿಗೆಗೆ — ನಾನು ಕಂಡಿತ್ತಿಲ್ಲ. ಮನುಷ್ಯರನ್ನ ಗುತ್ತಿಗೆಗೆ ತೆಗೆದುಕೊಂಡಿದ್ದುಂಟು, ಕೊಂಡುಕೊಂಡಿದ್ದೂ ಉಂಟು. ಆದರೆ ಬಾಡಿಗ್ಗೆ—....ಅಯ್ಯೊ ! ದೇವರೇ !

ಹದಿನಾಲ್ಕನೇ ತಾರೀಖು ಅನ್ನಿ, ಹೋದ ತಿಂಗಳು, ನಮ್ಮ ಮನೆಯಲ್ಲಿ ಜನಗಣತಿ ಮುಗಿದಿತ್ತು. ಪೇಟೆಗೆ ಹೋಗಿ ಅಡವಿಟ್ಟಿದ್ದ ಕೊಳದಪ್ಪಲೆ ಬಿಡಿಸಿ ಕೊಂಡು ಬರೋಣ ಅಂತ ಹೋದೆ. ಗಿರವಿ ಅಂಗಡೀಲಿ, "ಸ್ವಲ್ಪಹೊತ್ತು ಇರಿ ಸಾರ್. ನಮ್ಮ ಹುಡುಗ ಬಾಡಿಗ್ಗೆ ಹೋಗಿದ್ದಾನೆ. ಬರುತ್ತಲೂ ತೆಗೆಸಿ ಕೊಡ್ತೀವಿ" ಎಂದರು. 'ಇದೇನ್ರೀ ನಿಮ್ಮ ಹುಡುಗ ಬಾಡಿಗ್ಗೆ ಅಂದರೆ? ಎಂದು ಕೇಳಿದೆ—'ಹೌದು ಸಾರ್ ಬಾಡಿಗ್ಗೆ ಹೋಗಿದಾನೆ. ಜನಗಣತಿಯವರು ಬಂದಾಗ ನಮ್ಮನೇಲಿ ಅವನ್ನ ತೋರಿಸಿದಿವಿ. ನಮ್ಮವರದೇ ಒಂದು ಮನೆ ಇದೆ ಆ ಕೇರೀಲಿ. ಇಲ್ಲಿಂದ ಮುಗಿದ ಕೂಡಲೇ ನಮ್ಮ ಹುಡುಗರನ್ನು ಅಲ್ಲಿಗೆ ಕಳಿಸಿದೆ. ಆ ಮನೆಯಲ್ಲೂ ಅವರೇ ಜನಗಣತಿ ಹೊತ್ತಿಗೆ ಇದ್ದರೆ - ಅಲ್ಲೂ ಲೆಕ್ಕ ಸರಿಹೋಗುತ್ತೆ. ಅವರು ನಮ್ಮ ಹುಡುಗರಿಗೆ ತಲಾ ೨-೨ ರೂಪಾಯಿ ಕೊಡು ತ್ತಾರೆ. ಬಡವರು ಸಂಪಾದಿಸಿಕೊಳ್ಳಲಿ ಎಂದು ನಾನೂ ಒಪ್ಪಿದೆ. ಇಲ್ಲದೇ ಇದ್ದರೆ, ಕೊಡೋ ಊಟ ಎಲ್ಲಿಗೆ ಸಾಕು ಸಾರ್ ?' ಎಂದ.

'ಏನಯ್ಯಾ, ಕಾಲ ಮಿಂಚಿಹೋಯ್ತೆ ? ನನ್ನನ್ನು ಯಾರಾದರೂ ಬಾಡಿಗ್ಗೆ ತೊಗೋತಾರೆ ಅಂತೀಯಾ ? ಈ ಕೊಳದಪ್ಪಲೆ ಬಡ್ಡಿ ಹಣವಾದರೂ ಗಿಟ್ಟು ತ್ತೇನೋ !' ಎಂದೆ.

'ಇಲ್ಲಾ ಸಾರ್. ನೀವೆಲ್ಲಾ ಓದ್ದೋರು ಸಿಕ್ಕಿಹಾಕಿಕೊಂಡು ಬಿಡ್ತೀರಿ. ನಮ್ಮ ಹುಡುಗನಿಗೆ ಬೇರೆ ರುಮಾಲು ಸುತ್ತಿದರೆ, ಅವನ ತಂದೆ ತಾಯಿಗಳಿಗೇ ಗುರುತು ಸಿಗೊಲ್ಲ ; ಹಾಗಿರ್ತಾರೆ ನಮ್ಮ ಹುಡುಗರು ' ಎಂದ.

ಮೂಗಿನಮೇಲೆ ಬೆರಳಿಟ್ಟುಕೊಂಡು ಬಾಡಿಗೆ ಹುಡುಗ ಬರೋ ತನಕ ಕಾದಿದ್ದೆ. ಸುಮಾರು ಹತ್ತುವರ್ಷದ ಮೂರು ಹುಡುಗರು ಹಾವಿನ ಸಿಂಬಿ ತಲೆಗೆ ಸುತ್ತಿಕೊಂಡು, ಸ್ವಲ್ಪ ಹೊತ್ತಾದಮೇಲೆ, ಝುಣ ಝುಣ ಶಬ್ದಮಾಡಿಕೊಂಡು ಹಿಂತಿರುಗಿ ಬಂದರು. ನನ್ನ ಕೊಳದಪ್ಪಲೆ ಒಳಗಿಂದ ಹುಡುಕಿ ತರೋವಾಗ ಕೇಳಿದೆ 'ಎಷ್ಟಯ್ಯಾ ಗಿಟ್ಟಿಸಿದೆ' ಅಂತ. 'ಆರು ರೂಪಾಯಿ ಸಾಮಿ. ಮೂರು ಕಡೆ ಬಾಡಿಗ್ಗೆ ಒಪ್ಪಿಕೊಂಡಿದ್ದೆ.' ಎಂದ.

—ಅಲ್ಲಾ ! ಮನುಷ್ಯ !—ಬಾಡಿಗ್ಗೆ !

ಇನ್ನೂ ಏನೇನಿದೆಯೋ ?

ಅರೆಹೊಟ್ಟೆ ಆದರೆ ಬಾಡಿಗ್ಗೆ ಒಪ್ಪಿಕೊಂಡಾಗ- ಪೂರ್ತಾ ಉಪವಾಸ ಆದರೆ ಮನುಷ್ಯನ್ನ ಮಾರೋದರಲ್ಲಿ ತಪ್ಪೇನು ಅಂತೀನಿ—

—ವ್ಯಯ.

———

ಯೌವ್ವನವು ಬಲು ಅಮೋಘವಾದ ವರ. ಏನನ್ಯಾಯ ! ಅದನ್ನು ಮಕ್ಕಳ ಮೇಲೆ ವ್ಯರ್ಥಮಾಡುವುದು ? '—ಎಂದರಂತೆ ಬರ್ನಾಡ್ ಷಾ !

—ತಮ್ಮ ತಾಯಿಯನ್ನು ಜ್ಞಾಪಿಸಿಕೊಂಡರೇನೋ ?

* * * *

ಆತನ ಹಿರಿಮೆ ಏನು ಎನ್ನುತ್ತೀರಿ - ನುಂಗಲಾರದ ತುತ್ತನ್ನು ಬಾಯಿಗೆ ಹಾಕಿಕೊಳ್ಳುವುದು—ಅನಂತರ ಅದನ್ನು ನುಂಗುವುದು.

* * * *

ಹಸುವಿಗೆ ಬಾದಾಮಿ ತಿನ್ನಿಸಿದರೆ ಬಾದಾಮಿ ಹಾಲು ಕೊಡುತ್ತದೆ—ಶಾಲಾ ವಿದ್ಯಾರ್ಥಿಯ 'ಹರಟೆ'ಯಿಂದ.

* * * *

ಮುಖ ಚಿಕಿತ್ಸೆ

ದಿನಕ್ಕೊಂದಾವರ್ತಿ ಪೌಡರ್ ಎರಚುವುದರಿಂದ ಮಾತ್ರ ಭಾರತೀಯ ಶ್ರೀಮಂತ ಮಹಿಳಾಮಣಿಗಳು ತಮ್ಮ ಸಹಜಸುಂದರವಾದ ಅಂದಚಂದಗಳನ್ನುಳಿಸಿಕೊಳ್ಳಲಾರರೆಂದು ಈಚಿಗೆ ನಮ್ಮ ದೇಶದ ಪ್ರವಾಸ ಮುಗಿಸಿದ ಹಾಲಿವುಡ್ಡಿನ ಪ್ರಖ್ಯಾತ ಮುಖಚಿಕಿತ್ಸಕರೊಬ್ಬರು ಹೇಳಿಕೆ ಕೊಟ್ಟಿರುವರು. ವೃತ್ತಪತ್ರಿಕೆಗಳಲ್ಲಿ ಬರುವ ಜಾಹಿರಾತುಗಳನ್ನು ಒಮ್ಮೆ ಓದಿದರೂ ಕೂಡ ಮೂವತ್ತು ನಲವತ್ತರ ಹತ್ತಿರ ಹತ್ತಿರ ನರಿಯುತ್ತಿರುವ ಅನೇಕ ಭಾರತೀಯ ತಾರೆಯರು ತೈಲ ಚೂರ್ಣ ಸಾಬೂನುಗಳಿಂದ ತಮ್ಮ ಹರೆಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆಂದು ತಿಳಿದುಬರುತ್ತದೆ. ಆದರೆ. ಈ ಉಪಾಯಗಳಿಂದ ಏನೂ ಪ್ರಯೋಜನವಿಲ್ಲವೆಂಬುದನ್ನು ಆ ತಾರೆಯರ ಚಿತ್ರಗಳನ್ನು ನೋಡಿ ತಲೆ ಚಚ್ಚಿಕೊಂಡಿರುವ ನಮಗೆಲ್ಲ ವೇದ್ಯವಾದ ಸಂಗತಿ. ಹಾಲಿವುಡ್‌ನವರೇ ಬಂದು, ನಮಲ್ಲಿ ಮುಖಚಿಕಿತ್ಸಾಲಯಗಳನ್ನು ತೆರೆಯುವತನಕ ಕೆಳಗೆ ನಮೂದಿಸಿರುವ ಸೌಂದರ್ಯಲಾಭೋಪಾಯಗಳನ್ನು ನಮ್ಮ ಹೆಣ್ಮಣಿಗಳು ಆಚರಿಸಬಹುದು. ಹಾಗೆ ಮಾಡಿದರೆ, ಅವರ ಮುಖಗಳು ತುಂಬಾ ಆಕರ್ಷಣೀಯವಾಗುವುದರಲ್ಲಿ ಸಂದೇಹವಿಲ್ಲ.

ಕಾಕಂಬಿ, ಆಡಿನ ಹಾಲು, ಮೈದಾಹಿಟ್ಟು ಇವು ಮೂರನ್ನೂ ಕಲಸಿಟ್ಟುಕೊಂಡು, ಪ್ರಯೋಗವನ್ನು ಪ್ರಾರಂಭಿಸಬಹುದು. ಮುಖದಮೇಲೆ ಬೇಸರ ಕೋಪ ನಿರಾಶೆ ಇವುಗಳಿಂದಲೂ ವಯೋಧರ್ಮದಿಂದಲೂ ಬೀಳುವ ಸುಕ್ಕನ್ನು ತಿದ್ದಲು ಇದು ಒಳ್ಳೇ ದ್ರಾವಕ. ಮೊದಲು, ಸದರಿ ಮುಖವನ್ನು ಒಂದು ಮೇಜಿನಮೇಲಾಗಲಿ ಮಂಚದಮೇಲಾಗಲಿ ಅಡ್ಡವಾಗಿರಿಸಿ, ಸುಕ್ಕಿನೊಳಕ್ಕೆಲ್ಲ ದ್ರಾವಕವನ್ನು ತುಂಬುವುದು. ಇತರೇ ಹವ್ಯಾಸಗಳಿಲ್ಲದೆ ಇರುವ ಮಹಿಳೆಯರಿಗೆ ಇದು ಉತ್ತಮವಾದ ಉದ್ಯೋಗ. ನಾಲ್ಕು ತಿಂಗಳವರೆಗೆ ದಿನವೂ ಈ ರೀತಿ ಮಾಡುತ್ತ ಬಂದು, ಅನಂತರ ಕನ್ನಡಿ ನೋಡಿದಾಗ, ನಿಮಗೇ ಆಶ್ಚರ್ಯವಾಗುತ್ತದೆ.

ನಿಮಗೆ ಕೆನ್ನೆಗೆ ಹೊಡೆಯುವ ಅಭ್ಯಾಸವಿದ್ದರೆ, ಹಪ್ಪಳದ ಹಿಟ್ಟನ್ನು ದಪ್ಪವಾಗಿ ಮಾಡಿಕೊಂಡು ಹತ್ತಿಪ್ಪತ್ತು ಸಲ ಹೊಡೆದುಕೊಳ್ಳಬಹುದು, ಯಾರೂ ಬೇಡ, ಎಂಬುವ ಹಾಗಿಲ್ಲ. ಆಮೇಲೆ, ಮುಖವನ್ನು ಒಂದು ಪಕ್ಕಕ್ಕೆ ತಿರುಗಿಸಿ ನೋಡಿದರೆ, ಬೇಸರದ ಉದ್ದುದ್ದ ಗೆರೆಗಳೂ, ಆಯುಷ್ಯದ ಅಡ್ಡ ಗೆರೆಗಳೂ ಅಗಲಗಲವಾಗುತ್ತ ಬಂದು, ಕಡೆಗೆ ಮುಖವನ್ನೆಲ್ಲ ಆವರಿಸಿ ಮಾಯವಾಗುವುದನ್ನು

ನೀವೇ ಗೋಚರಿಸಬಹುದು! ಆದರೆ, ಗೆರೆಯೇ ಇಲ್ಲದ ಇಂಥ ಮುಖ ಚಿರಕಾಲ ಹಾಗೆಯೇ ನಿಲ್ಲಬೇಕಾದರೆ, ಬಹಳ ತ್ರಾಸ ತೆಗೆದುಕೊಳ್ಳಬೇಕಾಗುತ್ತದೆ. ಅದು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಸಿಗುತ್ತದೆ.

ಮುಖದಮೇಲಿನ ಮಾಂಸಖಂಡಗಳಿಗೂ ಚರ್ಮಕ್ಕೂ ವ್ಯಾಯಾಮ ಕೊಡುವುದರಿಂದ ಈ ಉದ್ದೇಶ ಸಫಲವಾಗುತ್ತದೆ. ಬಲ ಕೆನ್ನೆಯನ್ನೂ, ಅನಂತರ ಎಡಕೆನ್ನೆಯನ್ನೂ. ಕೈ ಬೆರಳುಗಳಿಂದ ಜೋವಾನವಾಗಿ ಎತ್ತಿ ಹಿಡಿದು ಗಳಕ್ಕನೆ ಕಿವಿವರೆಗೂ ಎಳೆದು ಬಿಗಿಸಬೇಕು. (ಹಾಲಿವುಡ್‌ನಲ್ಲಿ ಇದಕ್ಕೋಸ್ಕರ "ಕೆನ್ನೆ ಕ್ಲಿಪ್"ಗಳನ್ನು ತಯಾರುಮಾಡಿದ್ದಾರೆ) ಈ ತೆರವ ನೆಳೆತದಿಂದ ಕೆನ್ನೆಗಳೆರಡೂ ಒಂದು ಮಟ್ಟಕ್ಕೆ ಬಂದಮೇಲೆ, ಮುಖವನ್ನು ಮಂಚದಮೇಲಿಟ್ಟು ಬಲ ಪಕ್ಕದಲ್ಲಿ ಒಂದು ರೊಟ್ಟಿನ್ನು ಇರಿಸಿಕೊಳ್ಳಿ. ಸ್ತ್ರೀಯರ ಸೌಂದರ್ಯ, ಒಲುಮೆ ಒಲವು, ಒಯ್ಯಾರ—ಇವುಗಳನ್ನೇ ವರ್ಣಿಸುವ ಅಧುನಿಕ ಕವನಗಳನ್ನು ಹಾಲು ನೀರಲ್ಲಿ ನೆನೆಸಿ ಅರೆದು, ಅದನ್ನು ಒಂದು ಬೆಳ್ಳಿ ತಟ್ಟೆಯಲ್ಲಿ ತಂದು ಎಡಪಕ್ಕದಲ್ಲೇ ಇರಿಸಿ. ಈಗ, ಅಲ್ಲಿರುವುದು (1) ಮುಖ (2) ರೊಟ್ಟಿ (3) ಅರೆದದ್ದು, ನೆನಪಿರಲಿ. ನೆನಪಿದ್ದಮೇಲೆ, 2ರಮೇಲೆ 3ರನ್ನಿಟ್ಟು 1ರ ಪಕ್ಕದಲ್ಲಿ ಬಲವಾಗಿ ಹೊಡೆಯಿರಿ. 35 ಸಲ ಹೀಗೆ ಮಾಡಿಕೊಂಡ ಮೇಲೆ, ನಿರಾತಂಕವಾಗಿ ಆರಾಮದ ಕುರ್ಚಿಯಲ್ಲಿ ಕುಳಿತು ಬೇಕಾದ ಹಾಗೆ ಹಾಡು ಹೇಳಿರಿ....ಸಾಧ್ಯವಾದರೆ. ಸಾಧಾರಣ ಮುಖಗಳಿಗೆ ಇಷ್ಟು ಸಾಕು! ಅಸಾಧಾರಣ ಮುಖಗಳಾದರೆ, ಕಾಕಂಬಿ ಅಥವಾ ಹಿಟ್ಟು ಅಥವಾ ಅರೆದದ್ದು ಇವುಗಳನ್ನು ಮುಖದ ಪಕ್ಕದ ರೊಟ್ಟಿಗೆ ಬಳಿದು ಅದಕ್ಕೆ ಬಡಿದು ನಿರಾತಂಕವಾಗಿರುವುದೇ ಮೇಲು.

—o—

ಗೋರಿಂಗನ ಸಾವಿನ ಸುದ್ದಿ ಕೇಳಿದಮೇಲೆ ಸ್ಟಾಲಿನ್ನನು ತನ್ನಹತ್ತಿರ ಇದ್ದ ಗಾಜಿನ ಕೊಳವೆಯನ್ನು ಎಸೆದುಬಿಟ್ಟನಂತೆ.

* * *

ಕೊರವಂಜಿ ಕಛೇರಿಗೆ ಕಳ್ಳರು ಬಿದ್ದಿದ್ದಾಗ ಬೆಲೆಯುಳ್ಳದುದು ಯಾವುದೂ ಕಳುವಾಗಲಿಲ್ಲವಂತೆ—

—ಇಲ್ಲಿರಬೇಕಾದ ಕುಹಕಿಡಿಯೊಂದೇ ಕಳುವಾದುದು.—(ಸಂ.)

* * *

ಒಂದೇ ದಿವಸದ ಪೇಪರಿನಲ್ಲಿ

ಅಕ್ಟೋಬರ್ 16ನೇ ತಾ॥

ಪ್ರಪಂಚದ ಶಾಂತಿಯನ್ನು ಕೆಡಿಸಿ ಎರಡನೆಯ ಮಹಾಯುದ್ಧಕ್ಕೆ ಕಾರಣರು ಎಂದು ನಿರ್ಧರಿಸಲ್ಪಟ್ಟ ಒಂಬತ್ತು ಜರ್ಮನ್ ನಾಜೀ ಪ್ರಮುಖರನ್ನು ಗಲ್ಲಿಗೇರಿಸಿ ಸಾಯಿಸಲಾಯಿತು.

* * * *

ಇಪ್ಪತ್ತು ಜರ್ಮನ್ ವೈಜ್ಞಾನಿಕ ಪ್ರಮುಖರನ್ನು ಅಮೆರಿಕನ್ ಸೈನ್ಯದವರು ಗುಟ್ಟಾಗಿ ಸಾಗಿಸಿ ಅವರ ಕೈಯಿಂದ ಹೊಸ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿರುವರು.

* * * *

" ಹಿರೊಷಿಮ, ನಾಗಸಾಕಿಗಳನ್ನು ಧ್ವಂಸಮಾಡಿ ಆಬಾಲಗೋಪಾಲ ಸುಟ್ಟು ಬೂದಿ ಮಾಡಿದ್ದು ಬ್ರಿಟಿಷ್ ಹಾಗೂ ಅಮೆರಿಕನ್ ಜನನಾಯಕರು ! " (ಮ್ಯಾಂಚೆಸ್ಟರ್ ಗಾರ್ಡಿಯನ್).

* * * *

" ಪ್ರಪಂಚವು ಮತ್ತೆ ಎರಡು ಹೋಳಾಗಿದೆ. ಮತ್ತೊಂದು ಯುದ್ಧದ ಹೊಗೆಯಾಡುತ್ತಿದೆ ಇದನ್ನು ನಿಲ್ಲಿಸಬೇಕು " (ಫ್ರೆಂಚ್ ವಿದೇಶಾಂಗ ಮಂತ್ರಿ ...ಶಾಂತಿ ಸಮ್ಮೇಳನದ ಕೊನೆಯ ಅಧಿವೇಶನದಲ್ಲಿ).

* * * *

" ಎಲ್ಲವೂ ಕ್ಷೇಮವಾಗಿದೆ ಎಂದು ನಾವು ಸುಮ್ಮನಿರುವ ಹಾಗಿಲ್ಲ. ಚಕ್ರಾಧಿಪತ್ಯದ ರಕ್ಷಣಾವಿಧಾನವನ್ನು ಕೂಲಂಕಷವಾಗಿ ವ್ಯವಸ್ಥೆಮಾಡಬೇಕು " (ಚಾಟ್‌ಫೀಲ್ಡ್ ಪ್ರಭುಗಳು.... ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ)

* * * *

" ಏಷ್ಯಾಖಂಡ ಆಫ್ರಿಕಾಖಂಡಗಳ ಜನಗಳನ್ನು ನಾವು ಹಿಂಸಿಸುತ್ತಿರುವುದನ್ನು ಕುರಿತು, ವಿದೇಶಿಗಳು ಟೀಕೆ ಮಾಡುವಹಾಗಿಲ್ಲ. ನಮ್ಮದು ಬಿಳಿಯವರ ದೇಶ " (ಸಂಯುಕ್ತರಾಷ್ಟ್ರ ಶಾಸನವನ್ನು ರಚಿಸಿದ ಸ್ಮಟ್ಸ್‌ರು).

* * * *

" ಇತರ ಎಲ್ಲ ಕಡೆಗಳಲ್ಲೂ ಶಾಂತಿ ನೆಲೆಸಿದರೂ, ಗಡಿಪ್ರಾಂತದಲ್ಲಿ ಹೊಡೆದಾಟ ಇದ್ದೇ ಇರುತ್ತದೆ " (ಅಬ್ದುಲ್ ಖಯೂಂ ಖಾನ್)

* * * *

" ರಷ್ಯಾದೇಶದ ಬಡ್ಜೆಟ್‌ನಲ್ಲಿ ಮುಂದಿನ ವರ್ಷ ದೇಶದ ಸೈನಿಕಬಲವನ್ನು ಹೆಚ್ಚಿಸುವ ಸಲುವಾಗಿ ಶಾಸ್ತ್ರೀಯ ಸಂಶೋಧನೆಗೆ ಈ ವರ್ಷಕ್ಕಿಂತ ಎರಡೂವರೆಯಷ್ಟು ಹಣ "

* * * *

ಓಂ ಶಾಂತಿಃ ಶಾಂತಿಃ ಶಾಂತಿಃ

ಸಾರ್ !

—— —

ಮಧ್ಯಾಹ್ನ 2-30ಕ್ಕೆ, ಯಾರೋ ಹೊರಬಾಗಿಲ ಹತ್ತಿರ ಬಂದು, 'ಸಾರ್' ಅಂದರು. ' ನಾ....ರ್ ' ಎಂದು ಅದನ್ನೇ ಮತ್ತೆ ಹೇಳಿದರು. ಕೀಚಲು ಧ್ವನಿ. ಯಾವುದೋ ಕೆಲಸದಮೇಲೆ ಬಂದಿದ್ದವನಿರಬೇಕು. ' ಸಾರ್ '... ಅಂಗಲಾಚುವ ದನಿ. ವಿನಯ ಇದೆ, ಮನುಷ್ಯನಲ್ಲಿ. ಸಾಲಗಾರ ಗೀಲಗಾರ ಅಲ್ಲ ' ಸಾರ್ ' ....ನಾನು ಮನೆಯಲ್ಲಿಲ್ಲವೊ ಏನೋ ಎಂಬ ಭಯ ಕಾಣಿಸಿತು ದನಿಯಲ್ಲಿ. ಕೊಂಚ ಹೊತ್ತು ಆಸಾಮಿ ಮೌನವಾಗಿಯೇ ಇದ್ದ. ಪಾಪ! ಎಷ್ಟು ದೂರದಿಂದ ಬಂದಿದಾನೊ ? 'ಹೋಗಿಬಿಟ್ಟುಬಾರೊ, ಅವರನ್ನ ನೋಡಿ ಈ ಮಾತು ಹೇಳಿ ಇತ್ಯರ್ಥಮಾಡಿಕೊಂಡು ಬಾ' ಅಂತ ಯಾವನಾದರೂ ಈತನನ್ನ ಹಿಡಿದು ಬಲವಂತವಡಿಸಿ ಕಳುಹಿಸಿದಾನೊ, ಏನೊ ! ನಿಂತ ಕಾಲು ಬದಲಾಯಿಸುತ್ತಿರಬಹುದು, ಈಗ. ಯಾಕೆ? ಸುಮ್ಮನಾಗಿ ಬಿಟ್ಟಿದಾನಲ್ಲಾ, ಪ್ರಾಣಿ! ತುಂಬಾ ಶಾಂತಿಪ್ರಿಯ ! ಅಥವಾ, ಇನ್ನೂ ಹೊಟ್ಟೆಗೆ ಪಿಂಡ ಬಿದ್ದಿಲ್ಲವೋ ಏನೊ ? ಮತ್ತೊಬ್ಬನಾದರೆ, ಇಷ್ಟು ಹೊತ್ತಿಗೆ....' ಸಾರ್ '. ಓ ! ಜೀವ ಇದೆ. ಇವನಿಗೂ, ' ಸಾ....ರ್ ', ಮತ್ತೆ ದೈನ್ಯ. ಇದೇ ತಪ್ಪು ನಮ್ಮ ಜನರಲ್ಲಿ ! ಧೈರ್ಯ ಇರಬೇಕು, ದೈನ್ಯ ಇರಕೂಡದು. ಒಬ್ಬರ ಮನೆಗೆ ಹೋಗುತ್ತೇವೆ, ಬಾಗಿಲು ಹಾಕಿರುತ್ತದೆ, ನೆಟ್ಟಗೆ ಬಾಗಿಲಮೇಲೆ ಕೈಹಾಕಿ ನಾಲ್ಕು ಸಲ ಬಡಿದು ಒಳಗಿರುವವರನ್ನು ಎಬ್ಬಿಸಿ, ಮಹಾರಾಯ ಮನೆಯಲ್ಲಿದಾನೋ ಇಲ್ಲವೊ, ಅಂತ ಪತ್ತೆ ಹಚ್ಚುವುದಿಲ್ಲ....ಸಾರ್ ಸಾರ್ ಅಂತ ಬೆಕ್ಕಿನ ಮರಿಹಾಗೆ ಬಾಗಿಲಾಚೆ ಗೋಳಾಡುವುದು....ಥೂ !....' ಸಾರ್ '....ಎಲಾ ! ಜಡಭರತ ! ಇನ್ನೂ ಅದೇ ಶ್ರುತಿಯಲ್ಲೇ ಕೂಗುತ್ತಿದೀಯೆಲ್ಲೋ ? ಹಿಂದೆ ನೀನು ಕೂಗಿದ್ದು ಕಿವಿಗೆ ಬೀಳದೆ ಇದ್ದ ಮೇಲೆ, ಅದಕ್ಕಿಂತ ಎತ್ತರದಲ್ಲಿ ಕೂಗಬೇಕು ಎಂಬ ಪರಿಜ್ಞಾನವೇ ಬೇಡವೆ ? ' ಸಾ....ರ್ ', ಅಯ್ಯೊ ! ಪ್ರಾಣಿ.... ಉದ್ದ ಎಳೆಯುತ್ತಿದೀಯೆ.... ಹೊರತು, ಎತ್ತರ ಬೆಳೆಯಬೇಕೋ ! ' ಡಬ್ ! ಡಬ್ ! ಸಾರ್'....ಹಾ ! ಅದೀಗ ಗಂಡಸುತನ ! ಬಾಗಿಲು ಬಡಿಯದೆ ಅದೆಂತಹ ಒದರಾಟ ? ಬಡಿ, ಬಡಿ, ಕೈ ನೋವು ಹತ್ತುವಷ್ಟು! ಬಾಡಿಗೆ ಮನೆ, ನನಗೇನಂತೆ? ಅಲ್ಲಾ ! ಸಾರ್ ! ಸಾರ್ ! ಅನ್ನಿಸಿಕೊಳ್ಳೋದಕ್ಕೆ ನನಗೇನು ಇವನು ಸರ್ ಟೈಟಲ್ ಕೊಟ್ಟಿದಾನೆಯೇ ? ಕೊಟ್ಟರೂ ನಾನು ಅಂಗೀಕರಿಸಬಹುದೆ ? ಸ್ವಾಮಿ, ಅಂತ ಬಾಯಿತುಂಬ ಒಂದುಸಲ ಅಂದರೆ ಇವನ ನಾಲಗೆ ಸೀದುಹೋಗುತ್ತದೆಯೇ ?....'ಥಬ್ ಥಬ್'....ಸರಿ ! ನಾನು

ಯೋಚಿಸಿದ್ದೇ ಸರಿ . .ಊಟವಾಗಿಲ್ಲ, ಇಸಮಿಗೆ ಇನ್ನೂ ! ಅಲ್ಲಾ ! ಇವನಿಗೆ ಹೊಟ್ಟೆಯಲ್ಲಿ ತಾಳವಾದರೆ, ನನ್ನ ನಿದ್ದೆಯನ್ನೇಕೆ ಕೆಡಿಸಬೇಕು, ಇಲ್ಲಿಗೆ ಬಂದು? ನಾನೇನು ಹೇಳಿಕಳುಹಿಸಿದ್ದೆನೆ. 'ಸಾರ್' ಅಥವಾ, ಈಗಲೇ ನಾನು ಇವನನ್ನ ಒಳಕ್ಕೆ ಕರೆದು ಕೂರಿಸಿ ಕಾರಭಾರ ನಡೆಯಿಸದೆ ಹೋದರೆ, ಪ್ರಪಂಚ 'ಸಾರ್' ಮುಳುಗಿ ಹೋಗುತ್ತದೆಯೇ ? ಬಂಗಾಳದ ಅನಾಹುತಗಳು ಬಿಹಾರಿಗೂ ಹರಡು ತ್ತವೆಯೇ ? 'ಸಾರ್' ಯಾಕೊ ! ಮನುಷ್ಯ ತಾಳ್ಮೆ ಕಳೆದುಕೊಳ್ಳುತ್ತಿದಾನೆ. ಭಗವದ್ಗೀತೆ ಓದಿಲ್ಲ ಅಂತ ಕಾಣುತ್ತೆ. ಪಾಪಿ ' ಸಾರ್ ' ಹೊ ! ಹೊ ! ಅಷ್ಟು ರೇಗಬೇಡ, ತಮ್ಮ! ಕೋಪವೆಂಬುದನರ್ಥಸಾಧಕ....ಇತ್ಯಾದಿ ಗಟ್ಟಿಮಾಡಿಸಿಲ್ಲವೊ, ಏನೊ, ಈತನ ಮೇಷ್ಟರು ? 'ಢಬ್ ಢಬ್ ಢಬ್' ಗುದ್ದಿ ಗುದ್ದಿ ಮುಷ್ಟಿಯಾಕೆ ನೋಯಿಸಿಕೊಳ್ಳುತ್ತೀಯೋ , ಬಡಪಾಯಿ !....ತಪ್ಪಾಯ್ತು.... ತಪ್ಪಾಯ್ತು. ಬಡಪಾಯಿ ಎಂಬುದು ಅಸಭ್ಯಮಾತು ಅಂತ ನಿಶ್ಚಯವಾಗಿ ಹೋಗಿದೆ, ಮೊನ್ನೆ. ನೀನು ಯಾರೋ, ಏನೋ, ಯಾವ ದೂತನೋ, ಯಾವ ರಾಯಭಾರಿಯೋ, ನಿನ್ನನ್ನ ನಾನು ಅರಿಯದೆ ತಿಳಿಯದೆ ಅಸಭ್ಯ...'ಸಾರ್' ಮತ್ತೆ, ಅದನ್ನೇ ಒದರುತ್ತೀಯೆಲ್ಲೋ ? ಇನ್ನೇನೂ ಬರೋದಿಲ್ಲವೆ ? ಯಜಮಾನರೇ, ಅನ್ನ ಬಹುದು ; ಬುದ್ಧಿಯವರೇ ಅನ್ನಬಹುದು, ಮಿಸ್ಟರ್ ಅಂತಾರೆ, ಹೆಲೋ ಅಂ ತಾರೆ....'ಸಾರ್' ಇದೊಂದು ಗ್ರಹಚಾರ ನಮ್ಮಲ್ಲಿ....ಈಗ ನಾನು ಒಳಗಿಂದ ಯಾರು ? ಅಂತ ಕೂಗಿದರೆ, ಆತ ಆಚೆಯಿಂದ 'ನಾನು' ಅಂತ ಧ್ವನಿ ಕೊಡು ತ್ತಾನೆಯೇ ಹೊರತು, ತನ್ನ ಹೆಸರು ಕುಲ ಗೋತ್ರ ಕಾರ್ಯ ಕಾರಣ ಯಾವುದೂ ಹೇಳುವುದಿಲ್ಲ. ನಾವೇ ಊಹಿಸಿಕೊಳ್ಳ 'ಸಾ....ಅ....ಅ....ರ್‌ರ್' ವರಸೆ ನೋಡಿದರೆ, ಆಸಾಮಿ ನನ್ನನ್ನ ಕಂಡರೆ ತಲೆ ಒಡಿಯುತ್ತಾನೆ ಅಂತ ತೋರುತ್ತೆ. ....ಅಷ್ಟು ಬೆಂಕಿ ಕಾರುತ್ತಿರಬೇಕು, ಇಷ್ಟುಹೊತ್ತಿಗೆ, 'ಢಬ್ ! ಢಬ್ !' ಧತ್ ! ಈ ಮನೆಮಕ್ಕಳೋ, ಸೇರು ಪಾವು ಚಟಾಕು, ಸಾಲಾಗಿದ್ದರೂ ಒಂದೂ ಸಮ ಯಕ್ಕೆ ಒದಗುವುದಿಲ್ಲ. ನಾನೇ ಎದ್ದುಹೋಗಿ 'ಸಾರ್ !' ತಾಳಬಾರದೇನೊ ? ತಮ್ಮ ! ನಾನೇ ಎದ್ದುಹೋಗಿ ಚಿಲಕ ತೆಗೆಯಬೇಕು 'ಢಬ್' ಎಲ್ಲಿ ಹಾಳಾಗಿ ಹೋಗಿವೆ, ಎಲ್ಲಾ ? 'ಸಾರ್' ನಿನ್ನ ಮನೆಯಲ್ಲೂ ಹೀಗೆಯೇ ಅಲ್ಲವೇನೋ ?.... ಕೂಗುತ್ತಾನೆ, ಮಹಾ, ಮಧ್ಯಾಹ್ನ ಎರಡೂವರೆ ಗಂಟೆಗೆ ಬಂದು.. .ಇಷ್ಟು ಹೊತ್ತಿ ನಲ್ಲಿ ನಿನ್ನ ಮನೆಮಕ್ಕಳೂ ನಿನಗೆ ಸಿಗುವುದಿಲ್ಲ ನೀನೂ ಕೂಡ ನನ್ನಹಾಗೆ ಮಲಗೇ ಇರುತ್ತೀಯಾ... ಬಹುಶಃ ' ಢಬ್ ಢಬ್ ' ಮುಸಲಾ, ನಾನೇ ನಿನ್ನ ಮನೆಗೆ ಬಂದು ನಿನ್ನ ಬಾಗಿಲ ಹತ್ತಿರ ಹೀಗೆ ನೆಟ್ಟುಕೊಂಡು, ತಲೆ ಕೆರೆಯುತ್ತ ನಿನ್ನಹಾಗೆ ಸಾರ್ ಸಾರ್ ಸಾ ಅ ರ್ ಅಂತ....' ಸಾ....ಅ....ಅ....ರ್ ' ಥೂ ! ಹಾಳು ! ಎದ್ದೇ ಬಿಡುತ್ತೇನೆ 'ಸಾರ್' ಒಳ್ಳೇ ಯಮಕಿಂಕರ 'ಢಬ್' ಬಂದ ಹಾಗೆ ಬಂದಿದಾನೆ. ವೇಳೆ ಅವೇಳೆ 'ಸಾರ್' ಗಮನವೇ ಇಲ್ಲ 'ಢಬ್ ಢಬ್'

ನಿನ್ನ ಮುಖಕ್ಕೆ ಬೆಂಕಿ ಹಾಕ 'ಸಾರ್' ಥತ್! ಸಾರಂತೆ ಸಾರು! 'ಥಬ್' ಕುದಿಯೋ ಸಾರು ಸುರಿಯಬೇಕು 'ಸಾರ್' ಹುಂ ..ಅದೇ. .

"ಓಹೋ! ಏನಯ್ಯಾ !.......ರಾಜು".

"ಏನೂ ಇಲ್ಲ! ಸಾಹೇಬರು ಹೊರಗಡೆ ಕಾರಲ್ಲಿ ಕೂತಿದಾರೆ. . ಸರ್ಕೀಟ್ ಹೊರಡುವ ಮೊದಲು ನಿಮ್ಮ ಹತ್ತಿರ ಏನೋ ಹೇಳಬೇಕಾಗಿದೆಯಂತೆ ಕರೆಯುತ್ತಿದಾರೆ"...."ಬಂದೆ"..."ಬೇಗ ಬನ್ನಿ!".

ರೇವಣ್ಣ.

ಪ್ಯಾರಿಸ್ಸಿನಲ್ಲಿ ಮೊಲಾಟಾಫಿನ್ 'ವೀಟೋ' ದಿಂದ ಅವರಿಗೆ ಪ್ರತಿಕೂಲವಾಗಬಹುದಾದ ನಿರ್ಣಯ ಬಿದ್ದುಹೋಯ್ತಂತೆ.

—ಸರಿ ಮುಲಟಾಫಿನ ರೊಟ್ಟಿ ಬುಟ್ಟಿಗೆ ಬಿದ್ದಂತೆಯೇ—ಯುದ್ಧಕಾಲದಲ್ಲಿ ಅವನ 'Bread Baskets' ಹೆಸರು ಗಳಿಸಿತ್ತಲ್ಲವೇ?

* * *

ಬೊಂಬಾಯಿನಲ್ಲಿ ಈಬಾರಿ ದೀಪಾವಳಿಯನ್ನು ಆಚರಿಸುವುದಿಲ್ಲವಂತೆ.

—ಬರೀ ಜೂಪಾವಳಿಯನ್ನು ಆಚರಿಸುವರಂತೆ.

* * *

ಗಡಿನಾಡಿನಲ್ಲಿ ಖಾನ್ ಬಹದ್ದೂರ್ ಗಫಾರ್‌ಖಾನರಿಗೆ ಏಟು ಬಿದ್ದು ಮೂಗಿನಿಂದ ರಕ್ತ ಸುರಿಯಿತಂತೆ.

—ಅವರಿಗೆ ಆಗಾಗ್ಯೆ ಮೂಗಿನ ಸೆಲೆ ಒಡೆಯುತ್ತದೆ. ಏಟನಿಂದಲ್ಲ—ಎಂದು ಮುಸ್ಲಿಂ ಲೀಗಿನವರ ವಾದವಂತೆ.

* * *

ಕಲಿಗನ್ನಡ ಸ್ಪರ್ಧೆ—ಸರಿಯಾದ ಉತ್ತರ: (1) ಹಿ, (2) ಬ, (3) ಕ, (4) ನಿ, (5) ಬ, (6) ಥ, (7) ಕೊನೆಯ ಅಕ್ಷರಕ್ಕೆ ಹೊಟ್ಟೆ ಸೀಳಿ.

—ಟೀಯಸ್ಸಾರ್ರಾವ್.